# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ –೧೬೧<br>Volume - 161 | ಬೆಂಗಳೂರು, ಸೋಮವಾರ, ೨೯, ಜೂನ್, ೨೦೨೬ (ಆಷಾಢ, ೦೮, ಶಕವರ್ಷ, ೧೯೪೮)<br>BENGALURU, MONDAY, 29, JUNE, 2026 ( ASHADHA, 08, SHAKAVARSHA, 1948) | ಸಂಚಿಕೆ ೧೨೪<br>Issue 124 |
|---|---|---|


## ಭಾಗ ೩

## ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

## HIGH COURT OF KARNATAKA, BENGALURU

**NOTIFICATION**

**No: HCRB/DEA-6/2026 (RPC) DATED 29TH JUNE 2026**

**DIRECT RECRUITMENT OF THE CANDIDATES TO THE POST OF DATA ENTRY ASSISTANT**

**UNDER RESIDUAL PARENT CADRE**

**LAST DATE FOR SUBMISSION OF APPLICATION THROUGH ONLINE: 28TH JULY 2026**

It is hereby notified that applications are invited through online from the eligible candidates who fulfil the essential qualifications and other eligibility conditions as on the last date fixed for submission of applications for recruitment to 21 Posts (including 6 Backlog Posts) of Data Entry Assistant under Residual Parent Cadre on the Establishment of the High Court of Karnataka, Bengaluru by way of Direct Recruitment through online link i.e., https://judiciary.karnataka.gov.in.

**PART-A**

1. **Classification of vacancies**:

**21 POSTS UNDER RESIDUAL PARENT CADRE (INCLUDING 6 BACKLOG POSTS)**

<table>
<tr><th colspan="2">Category</th><th>Un-reserved</th><th>Women Candidate</th><th>Rural Candidate</th><th>Kannada Medium Student</th><th>Persons with benchmark disability</th><th>Persons displaced from project</th><th>Ex-servicemen</th><th>Transgender</th><th colspan="2">TOTAL</th></tr>
<tr><td colspan="2">General Merit</td><td>2</td><td>3</td><td>2</td><td>-</td><td>1+2*</td><td>-</td><td>-</td><td>-</td><td colspan="2">8+2*</td></tr>
<tr><td colspan="2">Scheduled Caste (Backlog Post)</td><td>-</td><td>-</td><td>1*</td><td>-</td><td>1*</td><td>-</td><td>-</td><td>-</td><td colspan="2">2*</td></tr>
<tr><td colspan="2">Scheduled Caste (Category – A)</td><td>1</td><td>-</td><td>-</td><td>-</td><td>-</td><td>-</td><td>-</td><td>-</td><td>1</td><td rowspan="4">3</td></tr>
<tr><td colspan="2">Scheduled Caste (Category – B)</td><td>1</td><td>-</td><td>-</td><td>-</td><td>-</td><td>-</td><td>-</td><td>-</td><td>1</td></tr>
<tr><td rowspan="2">Scheduled Caste (Category – C)</td><td>others</td><td>-</td><td>-</td><td>-</td><td>-</td><td>-</td><td>-</td><td>-</td><td>-</td><td rowspan="2">1</td></tr>
<tr><td>MBC **</td><td>1</td><td>-</td><td>-</td><td>-</td><td>-</td><td>-</td><td>-</td><td>-</td></tr>
<tr><td colspan="2">Scheduled Tribe</td><td>-</td><td>-</td><td>-</td><td>-</td><td>-</td><td>-</td><td>-</td><td>-</td><td colspan="2">-</td></tr>
<tr><td colspan="2">Category - I</td><td>-</td><td>-</td><td>1*</td><td>-</td><td>-</td><td>-</td><td>-</td><td>-</td><td colspan="2">1*</td></tr>
<tr><td colspan="2">Category - II(A)</td><td>1</td><td>1</td><td>-</td><td>-</td><td>1*</td><td>-</td><td>-</td><td>-</td><td colspan="2">2+1*</td></tr>
<tr><td colspan="2">Category - II(B)</td><td>1</td><td>-</td><td>-</td><td>-</td><td>-</td><td>-</td><td>-</td><td>-</td><td colspan="2">1</td></tr>
<tr><td colspan="2">Category - III(A)</td><td>-</td><td>-</td><td>-</td><td>-</td><td>-</td><td>-</td><td>-</td><td>-</td><td colspan="2">-</td></tr>
<tr><td colspan="2">Category - III(B)</td><td>1</td><td>-</td><td>-</td><td>-</td><td>-</td><td>-</td><td>-</td><td>-</td><td colspan="2">1</td></tr>
<tr><td colspan="2">TOTAL</td><td>8</td><td>4</td><td>2+2*</td><td>-</td><td>1+4*</td><td>-</td><td>-</td><td>-</td><td colspan="2">15+6*</td></tr>
</table>

Note:

1. (*) Indicates backlog vacancies.
2. (**) Indicates Most Backward Class.
3. The above classification of vacancies is made on the basis of Government Order Nos. SWD 515 PKV 2026 dated 08.05.2026, DPAR 02 SeHiMa 2026 dated 13.05.2026 and 25.05.2026.
4. The above classification of vacancies for Persons with Benchmark Disability made as per Government Order No. DPAR 149 SRR 2020 dated 25.09.2020, the details are as under:

<table>
<tr><th>Category</th><th>Points for Horizontal Reservation</th><th>Nature of Disability</th></tr>
<tr><td rowspan="2">General Merit (Backlog Post)</td><td>Point No.44</td><td>Deaf and hard of hearing</td></tr>
<tr><td>Point No.84</td><td>Locomotor Disability including cerebral palsy, leprosy cured, dwarfism, acid attack victims and muscular dystrophy.</td></tr>
<tr><td>General Merit (Fresh Post)</td><td>Point No.4</td><td>Blindness and low vision</td></tr>
</table>

| | | |
|---|---|---|
| Scheduled Caste (Backlog Post) | Point No.44 | Deaf and hard of hearing |
| Category – II(A) (Backlog Post) | Point No.44 | Deaf and hard of hearing |

**2. <u>Scale of Pay</u>:**

₹25500 – 81100 (Level - 4) with admissible allowances.

**3. <u>Method of Recruitment</u>:**

Selection of candidates will be made in accordance with

a) The High Court of Karnataka Service (Conditions of Service and Recruitment) Rules, 1973 as amended from time to time,

b) The High Court of Karnataka Service (Direct Recruitment by Selection) Rules, 1984 as amended from time to time,

c) The Karnataka Civil Services (General Recruitment) Rules, 1977,

d) The Karnataka Scheduled Castes, Scheduled Tribes and Other Backward Classes (Reservation of Appointment etc.) Act, 1990,

e) The Karnataka Scheduled Castes, Scheduled Tribes and Other Backward Classes (Reservation of Appointment, etc.) Rules, 1992.

f) The Government Circulars/Notification as under:

| Sl. No. | Government Notification/Circular | Date | **Subject** |
|---|---|---|---|
| 1. | DPAR 262 SRR 2025 | 29.01.2026 | Providing Age Relaxation of 5 years (as a one time measure). |
| 2. | DPAR 08 SRR 2001 | 13.02.2001 | Regarding candidates claiming Rural Reservation. |
| 3. | DPAR 149 SRR 2020 | 25.09.2020 | Regarding claiming Reservation under Persons with Benchmark Disabilities. |
| 4. | DPAR 19 SRR 2020 | 12.10.2020 | Regarding No Objection Certificate (NOC) in respect of In-service candidates. |

**4. <u>Eligibility Criteria</u>:**

**(a) Qualification:**

**I)** Must have passed Bachelor Degree in Science / Arts / Commerce / Business Management / Computer Applications of a recognized

University with minimum of 55% marks in the aggregate for candidates belonging to General Category and Other Backward Categories and a minimum of 50% marks in the aggregate for candidates belonging to Scheduled Caste and Scheduled Tribes.

**AND**

**II)** Must have passed Senior Grade Typewriting examination in English and Kannada with knowledge of operation of Computers.

Note: Knowledge of operation of computers means possessing a certificate in computer basics issued by an Institute imparting Computer education.

**(b) Age limit:**

A candidate applying to the said post shall not be less than 18 years of age and the maximum age limit in respect of candidates belonging to the following categories is as under:

| Candidates belonging to | Maximum age Limit |
|---|---|
| General Merit | 40 years |
| Category - II(A) / II(B) / III(A) / III(B) of Other Backward Classes | 43 years |
| Scheduled Caste / Scheduled Tribe / Category – I of Other Backward Classes | 45 years |

**5. <u>Application fee</u>:**

The candidates shall pay the Application fee through State Bank of India online payment gateway as mentioned in the online application.

The fee prescribed for the candidates is as under:

| Candidates belonging to | Application Fee |
|---|---|
| General Merit | ₹350/- |
| Category - II(A) / II(B) / III(A)/ III(B) of Other Backward Classes | ₹350/- |
| Scheduled Caste/ Scheduled Tribe/ Category-I of Other Backward Classes/Persons with Benchmark Disability. | ₹200/- |

**Note:**

1. Candidates must note that fee once paid will not be refunded under any circumstances even in case where fee has been paid for more than one application.
2. To avoid last minute rush, the candidates are advised to submit the application through online well in advance.
3. The candidates can submit the application and make payment of application fee round the clock till 11.59 p.m. of 28.07.2026.
4. The applications which do not fulfil the requirements shall be rejected.
5. The candidates who are called for Typing Test and Interview, as the case may be, will be informed in this regard.

**6. Probation:**

A candidate who is selected and appointed will initially be on probation for a period of two years or for extended period, if necessary.

**7. Mode of Selection:**

**(i) Listing of candidates for Typing Test:**

Listing of candidates for Typing Test for recruitment to the post of Data Entry Assistant will be on the basis of the percentage of total marks secured in the qualifying examination in the order of merit, and if two or more candidates have secured equal percentage of total marks in the qualifying examination, the order of merit in respect of such candidates shall be fixed on the basis of their age. From among the candidates whose names are included in such list, as far as may be such number of candidates as is equal to ten times the number of vacancies notified, selected in the order of merit, will be called for the Typing Test.

**(ii)** The Selection to the post of Data Entry Assistant will be made on the basis of performance in the Typing Test and Interview as under:

| Sl. No. | Particulars | Maximum Marks | Minimum Marks for passing the test |
|---|---|---|---|
| 1. | Typing Test | 100 | 60 |
| 2. | Interview | 20 | 10 |
| | **Grand Total** | **120 Marks** | **70 Marks** |

**(iii) Procedure prescribed for conducting the Typing Test:**

A passage containing 500 words will be dictated for a duration of 10 minutes and the candidates shall transcribe the dictated passage within 20 minutes in the Computer.

**(iv) Interview:**

The candidates will be called for interview in the order of merit from among the successful candidates in the Typing Test and as far as may be, such number of candidates as is equal to five times the number of vacancies notified in each respective category.

## PART-B

### General Instructions:

The candidates shall read all the instructions carefully before submitting the online application.

While submitting application through online, the candidate shall ensure that he/she fulfils the eligibility criteria and other norms. The candidates shall possess all the relevant Marks Cards and documents relating to Educational Qualification/reservations claimed before applying.

**I.** If a candidate is claiming particular qualification as equivalent as per the requirement of this Notification, then the candidate is required to attach and upload copy of the order/letter alongwith the relevant qualification indicating the Authority (with number and date) under which it has been so treated. If the same is in vernacular language, a translated copy either in English or in Kannada, duly certified, shall also be uploaded.

**II. Procedure for submitting application through online:**

a. The candidate shall submit the application through online by visiting the official website of High Court of Karnataka i.e, https://judiciary.karnataka.gov.in.

**Note: Applications sent / submitted by any mode other than online will not be considered.**

b. The candidate is required to fill up the data while submitting the online application and payment of fee shall be made in accordance with the instructions. The candidate should ensure that the particulars filled in

are correct in all aspects before final submission of the online application. Application once submitted cannot be withdrawn or modified.

c. The candidate shall provide the Mobile number and valid Email ID mandatorily at relevant columns for the purpose of communication while submitting online application. The authority is not responsible for non-receipt of SMS or Email due to furnishing of incorrect information (i.e., invalid Mobile number and E-mail).

d. The candidate shall scan the latest passport size photograph with white background (having 5 cm of length X 3.5 cm of breadth with max. size 50kb) and signature on white paper in black ball point pen (having 2.5 cm of length X 7.5 cm of breadth with max. size 25kb) in jpg format and upload the same, while submitting the online application. The jpg images must be clear and visible, else the application will not be considered.

e. The candidate shall upload the following documents/testimonials as the case may be:

i) SSLC Marks Card (as proof of Date of Birth),

ii) Bachelor Degree in Science / Arts / Commerce / Business Management / Computer Applications of a recognized University I to VI Semesters Marks cards or I to III years Marks cards alongwith Convocation/Provisional Degree Certificate.

iii) Diploma in Commercial Practice / Secretarial practice I to VI Semesters or I to III years marks cards along with Convocation / Provisional Certificate, if Bachelor degree is pursued on lateral entry.

iv) English and Kannada Senior Grade Typewriting Certificate.

v) Caste Certificate and Income certificate, if applicable.

vi) Other reservations i.e., Rural from I to X standard, Persons with Benchmark Disability.

The scanned documents shall be uploaded in PDF format only and must be clear and legible.

**Note:** If any candidate fails to upload any of the above said documents at the time of submission of online application, later submission will not be considered.

f. Before final submission of online application, the candidate will be able to preview the duly filled application. Candidate is advised to take printout of the filled application for his/her record.

g. The candidate should retain the application number carefully for generation of Intimation Letter from the link provided on the website of High Court of Karnataka and for any other information regarding his / her eligibility for Typing Test and Interview.

h. (i) Candidates are advised to visit the website of High Court of Karnataka for updates regarding the recruitment to the post of Data Entry Assistant at regular intervals.

(ii) The list of eligible candidates for Typing Test and Interview will be published on the website of High Court of Karnataka i.e., https://judiciary.karnataka.gov.in. Further, a link will be provided for downloading the Intimation for Typing Test/Interview.

i. In case the candidate submits more than one online application, the candidate must note that the application last submitted will only be entertained. **No correspondence request to accept previous application(s) will be entertained.**

j. The candidates called for Typing Test and Interview will have to appear at their own cost at the place and time notified by High Court of Karnataka.

**III. Candidates Claiming Reservations**:

<table>
<tr><td rowspan="2">Caste reservation</td><td>(1)</td><td>The candidate shall possess the certificate in prescribed format as on the date of submission of application and uploading the same is mandatory, failing which the application will not be considered.</td></tr>
<tr><td>(2)</td><td>Prescribed format of Caste Certificate:<br><table>
<tr><td>Candidates belonging to Scheduled Caste / Scheduled Tribe</td><td>Form – D</td></tr>
<tr><td>Candidates belonging to Category – I</td><td>Form – E</td></tr>
<tr><td>Candidates belonging to Category-II (A)/ II (B)/ III(A)/ III (B)</td><td>Form – F</td></tr>
</table></td></tr>
</table>

| | | |
|---|---|---|
| | (3) | Candidates claiming reservation under Scheduled Caste shall possess latest Caste Certificate [i.e., Scheduled Caste (Category-A, Category – B and Category – C)] in the prescribed format. |
| Note:- The Caste and Income Certificate should have been obtained for Employment Purpose. The Caste Certificate issued for Education purpose or for obtaining benefits from schemes will not be considered. | | |

**IV. Other Reservations:**

| | | |
|---|---|---|
| Rural Reservation | (1) | Candidate who claim Rural Reservation should have studied from class I to X standard in rural area. |
| | (2) | Candidate belonging to General Merit and claiming the Rural Reservation shall submit a certificate in Form 2 duly countersigned by the Block Education Officer (BEO) and a certificate in Form No.1 stating that the candidate does not belong to Creamy Layer issued by the concerned Tahsildar. The said certificate should be obtained and be valid as on the last date fixed in the Notification. |
| | (3) | Candidate belonging to Scheduled Caste / Scheduled Tribe / Category - I, Category-II (A), II (B), III (A), III (B) claiming the Rural Reservation should mandatorily submit a certificate in Form-2 duly countersigned by Block Education Officer (BEO) and the same shall be valid as on the last date of Notification. If any candidate fails to submit the same, such candidate will be ineligible to claim Rural Reservation. |
| Reservation under Persons with Benchmark Disability | | Candidate claiming Reservation under Persons with Benchmark Disability shall possess the certificate issued by the concerned authority as on the last date of Notification as prescribed in the Official Memorandum No. DPAR 115 SRR 2005 dated 19.11.2005. |
| In-service candidates | | Candidates are required to submit No Objection Certificate (NOC) to this office immediately after the issuance of selection list but the same should be submitted before the issuance of appointment order. |

**Note**: The Caste and Other reservation certificates which are obtained after the last date fixed for submission of online application will not be considered.

i) The originals of the uploaded documents in respect of Educational qualification, caste and other reservations as claimed by the candidates shall be produced at the time of Typing Test / Interview / verification. If any candidate, fails to produce the same at the time of Typing Test / Interview / verification, it will result in cancellation of reservation of such candidates and their applications will be considered only under General Merit category, if they are eligible.

ii) Reservation certificates submitted in formats other than prescribed will not be considered.

**V.** Candidates called for Typing Test / Interview shall produce a copy of Intimation alongwith Proof of Identity i.e., Voter ID or Aadhaar Card or PAN Card or Ration Card or Passport or Driving Licence in Original alongwith the documents of reservation as mentioned at Part B -II (e).

**VI.** Three Character Certificates i.e.,

a) one certificate issued from the Head of the Institution in which the candidate has completed Degree with study details

and

b) Two certificates from respectable persons in the society and not being relative but who is well acquainted with the candidate.

**VII.** If any discrepancies are found in the online application and original documents submitted during verification, the candidate will be liable for cancellation of his/her candidature.

**VIII.** The information furnished (i.e., Caste/Reservations or any data) by the candidate in the online application will be final and any request for modification of the same will not be entertained under any circumstances.

**IX.** Merely attending the Typing Test / Interview shall not confer any right to appointment and no candidate shall be appointed to the post unless the High Court of Karnataka is satisfied, after such enquiries as may be considered necessary that the candidate is suitable in all respects for appointment to the post.

**X.** The candidate appointed to the post of Data Entry Assistant is liable to be posted at High Court of Karnataka, Principal Bench at Bengaluru or Benches at Dharwad and Kalaburagi.

**XI.** If any candidate attempts to obtain extraneous support by any means for candidature from any officials or non-officials, he/she will not be eligible for appointment.

**XII.** In the event of any inconsistency between Kannada and English version of this notification, the English version shall prevail.

**XIII.** On verification, at any time or at any stage of recruitment, if it is found that the information furnished by the candidate in the application is false or the candidate does not fulfill any of the eligibility criteria and/or that he/she has suppressed/twisted or truncated any material facts, his/her candidature will stand cancelled. If any of these shortcomings is found even after appointment, his/her appointment shall be liable to be terminated. Furnishing of wrong, incomplete or incorrect information would not only lead to disqualification but also liable for criminal prosecution for furnishing such information.

**BY ORDER OF HON'BLE THE CHIEF JUSTICE,**

**Sd/-**
**(M. CHANDRASHEKAR REDDY)**
**REGISTRAR GENERAL**

**ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು**

**ಅಧಿಸೂಚನೆ**

**ಸಂಖ್ಯೆ: HCRB/DEA – 6/2026 (RPC) ದಿನಾಂಕ 29ನೇ ಜೂನ್ 2026**

**ದತ್ತಾಂಶ ನಮೂದು ಸಹಾಯಕರ ಹುದ್ದೆಗಳಿಗಾಗಿ**
**ಅಭ್ಯರ್ಥಿಗಳ ನೇರ ನೇಮಕಾತಿ**

**ಉಳಿದ ಮೂಲ ವೃಂದದಲ್ಲಿ**

**ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 28ನೇ ಜುಲೈ 2026**

ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಇಲ್ಲಿ **21** ದತ್ತಾಂಶ ನಮೂದು ಸಹಾಯಕರ ಹುದ್ದೆಗೆ *(6 ಉಳಿಕೆ ಹುದ್ದೆಗಳು (ಬ್ಯಾಕ್‌ಲಾಗ್) ಸೇರಿದಂತೆ)* ಉಳಿದ ಮೂಲ ವೃಂದದ ಅಡಿಯಲ್ಲಿ ನೇರ ನೇಮಕಾತಿಗಾಗಿ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದವರೆಗೂ ಅಗತ್ಯ ಮತ್ತು ಇತರೆ ಅರ್ಹತಾ ಷರತ್ತುಗಳನ್ನು ಪೂರೈಸುವ ಅಭ್ಯರ್ಥಿಗಳು ಕರ್ನಾಟಕ ಉಚ್ಚ ನ್ಯಾಯಾಲಯದ ವೆಬ್‌ಸೈಟ್

https://judiciary.karnataka.gov.in ಮೂಲಕ ಆನ್‌ಲೈನ್ ಅರ್ಜಿಯನ್ನು ಸಲ್ಲಿಸಬಹುದೆಂದು ಅಧಿಸೂಚಿಸಲಾಗಿದೆ.

<u>**ಭಾಗ–ಎ**</u>

**1. <u>ಖಾಲಿ ಹುದ್ದೆಗಳ ವರ್ಗೀಕರಣ</u> :**

**ಉಳಿದ ಮೂಲವೃಂದದ 21 ಹುದ್ದೆಗಳು**
**[06 ಉಳಿಕೆ (ಬ್ಯಾಕ್‌ಲಾಗ್) ಹುದ್ದೆಗಳನ್ನೊಳಗೊಂಡಂತೆ]**

<table>
<tr><th colspan="2">ಪ್ರವರ್ಗ</th><th>ಸಾಮಾನ್ಯ ಅರ್ಹತೆ</th><th>ಮಹಿಳಾ ಅಭ್ಯರ್ಥಿ</th><th>ಗ್ರಾಮೀಣ ಅಭ್ಯರ್ಥಿ</th><th>ಕನ್ನಡ ಮಾಧ್ಯಮ ಅಭ್ಯರ್ಥಿ</th><th>ಅಂಗವಿಕಲ ಅಭ್ಯರ್ಥಿ</th><th>ಯೋಜನಾ ನಿರಾಶ್ರಿತ ಅಭ್ಯರ್ಥಿ</th><th>ಮಾಜಿ ಸೈನಿಕ</th><th>ತೃತೀಯ ಲಿಂಗ</th><th colspan="2">ಒಟ್ಟು</th></tr>
<tr><td colspan="2">ಸಾಮಾನ್ಯ ಅಭ್ಯರ್ಥಿ</td><td>2</td><td>3</td><td>2</td><td>–</td><td>1 + 2*</td><td>–</td><td>–</td><td>–</td><td colspan="2">8+2*</td></tr>
<tr><td colspan="2">ಪರಿಶಿಷ್ಟ ಜಾತಿ (ಉಳಿಕೆ ಹುದ್ದೆ)</td><td>–</td><td>–</td><td>1*</td><td>–</td><td>1*</td><td>–</td><td>–</td><td>–</td><td colspan="2">2*</td></tr>
<tr><td colspan="2">ಪರಿಶಿಷ್ಟ ಜಾತಿ (ಪ್ರವರ್ಗ–ಎ)</td><td>1</td><td>–</td><td>–</td><td>–</td><td>–</td><td>–</td><td>–</td><td>–</td><td>1</td><td rowspan="4">3</td></tr>
<tr><td colspan="2">ಪರಿಶಿಷ್ಟ ಜಾತಿ (ಪ್ರವರ್ಗ–ಬಿ)</td><td>1</td><td>–</td><td>–</td><td>–</td><td>–</td><td>–</td><td>–</td><td>–</td><td>1</td></tr>
<tr><td rowspan="2">ಪರಿಶಿಷ್ಟ ಜಾತಿ (ಪ್ರವರ್ಗ–ಸಿ)</td><td>ಇತರೆ</td><td>–</td><td>–</td><td>–</td><td>–</td><td>–</td><td>–</td><td>–</td><td>–</td><td rowspan="2">1</td></tr>
<tr><td>ಅ.ಹಿಂ**</td><td>1</td><td>–</td><td>–</td><td>–</td><td>–</td><td>–</td><td>–</td><td>–</td></tr>
<tr><td colspan="2">ಪರಿಶಿಷ್ಟ ಪಂಗಡ</td><td>–</td><td>–</td><td>–</td><td>–</td><td>–</td><td>–</td><td>–</td><td>–</td><td colspan="2">–</td></tr>
<tr><td colspan="2">ಪ್ರವರ್ಗ–I</td><td>–</td><td>–</td><td>1*</td><td>–</td><td>–</td><td>–</td><td>–</td><td>–</td><td colspan="2">1*</td></tr>
<tr><td colspan="2">ಪ್ರವರ್ಗ–II (ಎ)</td><td>1</td><td>1</td><td>–</td><td>–</td><td>1*</td><td>–</td><td>–</td><td>–</td><td colspan="2">2+1*</td></tr>
<tr><td colspan="2">ಪ್ರವರ್ಗ–II (ಬಿ)</td><td>1</td><td>–</td><td>–</td><td>–</td><td>–</td><td>–</td><td>–</td><td>–</td><td colspan="2">1</td></tr>
<tr><td colspan="2">ಪ್ರವರ್ಗ–III (ಎ)</td><td>–</td><td>–</td><td>–</td><td>–</td><td>–</td><td>–</td><td>–</td><td>–</td><td colspan="2">–</td></tr>
<tr><td colspan="2">ಪ್ರವರ್ಗ–III (ಬಿ)</td><td>1</td><td>–</td><td>–</td><td>–</td><td>–</td><td>–</td><td>–</td><td>–</td><td colspan="2">1</td></tr>
<tr><td colspan="2">ಒಟ್ಟು</td><td>8</td><td>4</td><td>2 +2*</td><td>–</td><td>1 + 4*</td><td>–</td><td>–</td><td>–</td><td colspan="2">15+6*</td></tr>
</table>

ಟಿಪ್ಪಣಿ:

1. (*) ಚಿಹ್ನೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಸೂಚಿಸುತ್ತದೆ.
2. (**) ಚಿಹ್ನೆ ಅತ್ಯಂತ ಹಿಂದುಳಿದ ವರ್ಗಕ್ಕೆಂದು ಸೂಚಿಸುತ್ತದೆ.
3. ಮೇಲಿನ ವರ್ಗೀಕರಣವನ್ನು ಸರ್ಕಾರದ ಆದೇಶ ಸಂಖ್ಯೆ ಸಕಇ 515 ಪಕವಿ 2026 ದಿನಾಂಕ 08.05.2026, ಸಿಆಸುಇ 02 ಸೆಹಿಮ 2026 ದಿನಾಂಕ 13.05.2026 ಮತ್ತು 25.05.2026 ರ ಪ್ರಕಾರ ಮಾಡಲಾಗಿದೆ.
4. ಮೇಲಿನ ವರ್ಗೀಕರಣವನ್ನು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 149 ಎಸ್‌ಆರ್‌ಆರ್ 2020, ದಿನಾಂಕ 25.09.2020 ಯ ಪ್ರಕಾರ ಅಂಗವಿಕಲ (Persons with benchmark disability) ವ್ಯಕ್ತಿಗಳಿಗೆ ಈ ಕೆಳಗಿನಂತೆ ಮೀಸಲಾತಿಯನ್ನು ಗುರುತಿಸಲಾಗಿದೆ.

| ಪ್ರವರ್ಗ | ಸಮತಳ ಬಿಂದುಗಳ ಸಂಖ್ಯೆ | ಷೆಡ್ಯೂಲ್‌ರನ್ವಯ ಗುರುತಿಸಲಾದ ಅಂಗವಿಕಲತೆ |
|---|---|---|
| ಸಾಮಾನ್ಯ ಅಭ್ಯರ್ಥಿ (ಉಳಿಕೆ ಹುದ್ದೆ) | 44ನೇ ಬಿಂದು | Deaf and hard of hearing |
| | 84ನೇ ಬಿಂದು | Locomotor Disability including cerebral palsy, leprosy cured, dwarfism, acid attack victims and muscular dystrophy. |
| ಸಾಮಾನ್ಯ ಅಭ್ಯರ್ಥಿ (ಹೊಸ ಹುದ್ದೆ) | 4ನೇ ಬಿಂದು | Blindness and low vision |
| ಪರಿಶಿಷ್ಟ ಜಾತಿ (ಉಳಿಕೆ ಹುದ್ದೆ) | 44ನೇ ಬಿಂದು | Deaf and hard of hearing |
| ಪ್ರವರ್ಗ–II (ಎ) (ಉಳಿಕೆ ಹುದ್ದೆ) | 44ನೇ ಬಿಂದು | Deaf and hard of hearing |

**2. ವೇತನ ಶ್ರೇಣಿ :**

₹25500 – 81100 (Level – 4) ಇತರೆ ಭತ್ಯೆಗಳೊಂದಿಗೆ.

**3. ನೇಮಕಾತಿಯ ವಿಧಾನ :**

ಅಭ್ಯರ್ಥಿಗಳ ಆಯ್ಕೆಯನ್ನು ಈ ಕೆಳಗಿನ ನಿಯಮಗಳ ಅನುಸಾರ ಮಾಡಲಾಗುತ್ತದೆ–

ಎ) ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಕರ್ನಾಟಕ ಉಚ್ಚ ನ್ಯಾಯಾಲಯದ (ಸೇವಾ ಮತ್ತು ನೇಮಕಾತಿ ಷರತ್ತುಗಳು) ನಿಯಮಗಳು, 1973,

ಬಿ) ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಕರ್ನಾಟಕ ಉಚ್ಚ ನ್ಯಾಯಾಲಯ ಸೇವಾ (ಆಯ್ಕೆಯ ಮೂಲಕ ನೇರ ನೇಮಕಾತಿ) ನಿಯಮಗಳು, 1984,

ಸಿ) ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977,

ಡಿ) ಕರ್ನಾಟಕ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳು (ನೇಮಕಾತಿ ಮೀಸಲಾತಿ ಇತ್ಯಾದಿ) ಕಾಯಿದೆ, 1990,

ಇ) ಕರ್ನಾಟಕ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳು (ನೇಮಕಾತಿ ಮೀಸಲಾತಿ ಇತ್ಯಾದಿ) ನಿಯಮಗಳು, 1992.

ಎಫ್) ಈ ಕೆಳಗಿನ ಸರ್ಕಾರದ ಸುತ್ತೋಲೆಗಳು / ಅಧಿಸೂಚನೆಗಳ ಪ್ರಕಾರ:–

| ಕ್ರಮ ಸಂಖ್ಯೆ | ಸರ್ಕಾರದ ಅಧಿಸೂಚನೆ / ಸುತ್ತೋಲೆ | ದಿನಾಂಕ | ವಿಷಯ |
|---|---|---|---|
| 1. | ಸಿಆಸುಇ 262 ಸೆನೆನಿ 2025 | 29.01.2026 | ವಯೋಮಿತಿಯಲ್ಲಿ 5 ವರ್ಷಗಳ ಸಡಲಿಕೆಯನ್ನು ನೀಡುವ ಬಗ್ಗೆ (ಒಂದು ಬಾರಿಯ ಕ್ರಮವಾಗಿ). |
| 2. | ಸಿಆಸುಇ 08 ಸೆನೆನಿ 2001 | 13.02.2001 | ಅಭ್ಯರ್ಥಿಯು ಗ್ರಾಮೀಣ ಮೀಸಲಾತಿ ಸೌಲಭ್ಯ ಕೋರುವ ಬಗ್ಗೆ. |
| 3. | ಸಿಆಸುಇ 149 ಸೆನೆನಿ 2020 | 25.09.2020 | ಅಂಗವಿಕಲ ಅಭ್ಯರ್ಥಿ ಮೀಸಲಾತಿ ಸೌಲಭ್ಯ ಕೋರುವ ಬಗ್ಗೆ. |

| | | | |
|---|---|---|---|
| 4. | ಸಿಆಸುಇ 19 ಸೆನೆನಿ 2020 | 12.10.2020 | ಸೇವಾನಿರತ ಅಭ್ಯರ್ಥಿಯ ನಿರಕ್ಷೇಪಣಾ ಪ್ರಮಾಣಪತ್ರದ ಬಗ್ಗೆ. |

**4. ಅರ್ಹತಾ ಮಾನದಂಡಗಳು:**

(a) **ವಿದ್ಯಾರ್ಹತೆ:**

1) ಅಭ್ಯರ್ಥಿಗಳು ಯಾವುದೇ ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯದಿಂದ ವಿಜ್ಞಾನ / ಕಲೆ / ವಾಣಿಜ್ಯ / ವ್ಯವಹಾರ ನಿರ್ವಹಣೆ (Business Management)/ ಕಂಪ್ಯೂಟರ್ ಅಪ್ಲಿಕೇಷನ್ಸ್ ವಿಷಯಗಳ ಪದವಿಯಲ್ಲಿ, ಸಾಮಾನ್ಯ ವರ್ಗ ಮತ್ತು ಇತರೆ ಹಿಂದುಳಿದ ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ಕನಿಷ್ಠ ಶೇಕಡ 55 ರಷ್ಟು ಅಂಕಗಳನ್ನು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ಕನಿಷ್ಠ ಶೇಕಡ 50 ರಷ್ಟು ಅಂಕಗಳೊಂದಿಗಿನ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು.

**ಮತ್ತು**

2) ಆಂಗ್ಲ ಮತ್ತು ಕನ್ನಡ ಬೆರಳಚ್ಚು ಪ್ರೌಢ ದರ್ಜೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಜೊತೆಗೆ ಕಂಪ್ಯೂಟರ್ ನಿರ್ವಹಣಾ ಜ್ಞಾನ ಹೊಂದಿರಬೇಕು.

ಟಿಪ್ಪಣಿ: ಕಂಪ್ಯೂಟರ್ ನಿರ್ವಹಣಾ ಜ್ಞಾನ ಎಂದರೆ ಕಂಪ್ಯೂಟರ್ ಬೇಸಿಕ್ಸ್ ಕೋರ್ಸಿನ ಪ್ರಮಾಣಪತ್ರವನ್ನು ಪ್ರಧಾನ ಮಾಡುವ ಕಂಪ್ಯೂಟರ್ ಶಿಕ್ಷಣ ನೀಡುವ ಸಂಸ್ಥೆಯಿಂದ ಹೊಂದಿರತಕ್ಕದ್ದು.

(b) **ವಯೋಮಿತಿ:**

ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕದಂದು ಎಲ್ಲಾ ಪ್ರವರ್ಗದವರು ಕನಿಷ್ಠ 18 ವರ್ಷದವರಾಗಿರಬೇಕು ಮತ್ತು ಗರಿಷ್ಠ ವಯೋಮಿತಿ ಈ ಕೆಳಕಂಡಂತೆ ಇರತಕ್ಕದ್ದು:

| ಅಭ್ಯರ್ಥಿಯು ಸೇರಿದ ವರ್ಗ | ಗರಿಷ್ಠ ವಯೋಮಿತಿ |
|---|---|
| ಸಾಮಾನ್ಯ ಅಭ್ಯರ್ಥಿಗಳು | 40 ವರ್ಷಗಳು |
| ಇತರೆ ಹಿಂದುಳಿದ ವರ್ಗಗಳ ಪ್ರವರ್ಗ – II(ಎ) / II(ಬಿ) / III(ಎ) / III(ಬಿ) | 43 ವರ್ಷಗಳು |
| ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಪ್ರವರ್ಗ – I | 45 ವರ್ಷಗಳು |

**5. <u>ಅರ್ಜಿ ಶುಲ್ಕ</u> :**

ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ಉಲ್ಲೇಖಿಸಿರುವಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಆನ್‌ಲೈನ್ ಪಾವತಿ ಗೇಟ್‌ವೇ ಮೂಲಕ ಅರ್ಜಿ ಶುಲ್ಕವನ್ನು ಪಾವತಿಸಬೇಕು. ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಶುಲ್ಕ ಈ ಕೆಳಗಿನಂತಿರುತ್ತದೆ:

| ಅಭ್ಯರ್ಥಿಯು ಸೇರಿದ ವರ್ಗ | ಅರ್ಜಿ ಶುಲ್ಕ |
|---|---|
| ಸಾಮಾನ್ಯ ಅಭ್ಯರ್ಥಿಗಳು | ₹350/– |
| ಇತರೆ ಹಿಂದುಳಿದ ವರ್ಗಗಳ ಪ್ರವರ್ಗ– II(ಎ) / II(ಬಿ) / III(ಎ) / III(ಬಿ) | ₹350/– |
| ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಪ್ರವರ್ಗ–I ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ (Persons with Benchmark Disability) | ₹200/– |

**<u>ಸೂಚನೆ:</u>**

1. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಅರ್ಜಿಗಳಿಗೆ ಶುಲ್ಕವನ್ನು ಪಾವತಿಸಿದ್ದರೂ ಸಹ, ಒಮ್ಮೆ ಪಾವತಿಸಿದ ಶುಲ್ಕವನ್ನು ಯಾವುದೇ ಸಂದರ್ಭದಲ್ಲೂ ಮರುಪಾವತಿಸಲಾಗುವುದಿಲ್ಲ ಎಂಬ ಅಂಶವನ್ನು ಅಭ್ಯರ್ಥಿಗಳು ಗಮನದಲ್ಲಿಟ್ಟುಕೊಳ್ಳಬೇಕು.
2. ಕೊನೆಯ ಕ್ಷಣದಲ್ಲಿ ಅರ್ಜಿ ಸಲ್ಲಿಸುವಾಗ ಆಗಬಹುದಾದ ಒತ್ತಡಗಳನ್ನು ತಪ್ಪಿಸಲು ಅಭ್ಯರ್ಥಿಗಳು ಮುಂಚಿತವಾಗಿಯೇ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವುದು.
3. ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಲು ಹಾಗೂ ಅರ್ಜಿ ಶುಲ್ಕವನ್ನು ಪಾವತಿಸಲು ದಿನಾಂಕ 28.07.2026, ರಾತ್ರಿ 11.59 ರವರೆಗೆ ನಿಗದಿಪಡಿಸಲಾಗಿರುತ್ತದೆ.
4. ಅವಶ್ಯಕತೆಗಳನ್ನು ಪೂರೈಸದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
5. ಬೆರಳಚ್ಚು ಪರೀಕ್ಷೆಗೆ ಮತ್ತು ಸಂದರ್ಶನಕ್ಕೆ ಕರೆಯಲ್ಪಡುವ ಅಭ್ಯರ್ಥಿಗಳಿಗೆ ಸಂದರ್ಭಾನುಸಾರ ತಿಳಿಸಲಾಗುವುದು.

**6. <u>ಸೇವಾ ಪರಿವೀಕ್ಷಣಾ ಅವಧಿ</u> :**

ಅಭ್ಯರ್ಥಿಯು ನೇಮಕಗೊಂಡ ಪಕ್ಷದಲ್ಲಿ ಪ್ರಾರಂಭಿಕವಾಗಿ ಎರಡು ವರ್ಷಗಳ ಅವಧಿಗೆ ಅಥವಾ ಅಗತ್ಯವಿದ್ದರೆ ವಿಸ್ತರಿಸಬಹುದಾದ ಅವಧಿಗೆ ಪರಿವೀಕ್ಷಣಾರ್ಥಿಗಳಾಗಿರುತ್ತಾರೆ.

**7. <u>ಆಯ್ಕೆ ವಿಧಾನ</u> :**

**(i)** ಬೆರಳಚ್ಚು ಪರೀಕ್ಷೆಗೆ ಅಭ್ಯರ್ಥಿಗಳ ಪಟ್ಟಿ:
ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳ ಅರ್ಹತೆಯ ಆಧಾರದ ಮೇಲೆ ದತ್ತಾಂಶ ನಮೂದು ಸಹಾಯಕರ ಹುದ್ದೆಗೆ ನೇಮಕಾತಿಗಾಗಿ ಬೆರಳಚ್ಚು ಪರೀಕ್ಷೆಗೆ ಅಭ್ಯರ್ಥಿಗಳನ್ನು ಪಟ್ಟಿ ಮಾಡುವುದು ಮತ್ತು ಅರ್ಹತಾ ಪರೀಕ್ಷೆಯಲ್ಲಿ ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳು ಒಟ್ಟು ಅಂಕಗಳ ಶೇಕಡಾವಾರು ಸಮಾನತೆಯನ್ನು ಪಡೆದಿದ್ದರೆ, ಅಂತಹ ಅಭ್ಯರ್ಥಿಗಳ ವಿಷಯದಲ್ಲಿ ಅರ್ಹತೆಯನ್ನು ವಯಸ್ಸಿನ ಆಧಾರದ ಮೇಲೆ ನಿಗದಿಪಡಿಸಲಾಗುತ್ತದೆ. ಅಭ್ಯರ್ಥಿಗಳ ಹೆಸರುಗಳನ್ನು ಒಳಗೊಂಡಿರುವ ಪಟ್ಟಿಯಲ್ಲಿ ಅಧಿಸೂಚಿಸಿರುವ

ಖಾಲಿ ಹುದ್ದೆಗಳ ಸಂಖ್ಯೆಗೆ ಹತ್ತು ಪಟ್ಟು ಅಭ್ಯರ್ಥಿಗಳನ್ನು ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡಿ, ಬೆರಳಚ್ಚು ಪರೀಕ್ಷೆಗೆ ಕರೆಯಲಾಗುವುದು.

**(ii)** ದತ್ತಾಂಶ ನಮೂದು ಸಹಾಯಕರ ಹುದ್ದೆಗೆ ಬೆರಳಚ್ಚು ಮತ್ತು ಸಂದರ್ಶನ ಸಾಮರ್ಥ್ಯದ ಆಧಾರದ ಮೇಲೆ ಆಯ್ಕೆಯನ್ನು ಈ ಕೆಳಕಂಡಂತೆ ಮಾಡಲಾಗುತ್ತದೆ.

| ಕ್ರಮ ಸಂಖ್ಯೆ | ವಿವರಗಳು | ಗರಿಷ್ಠ ಅಂಕಗಳು | ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಪಡೆಯಬೇಕಾದ ಕನಿಷ್ಠ ಅಂಕಗಳು |
|---|---|---|---|
| 1 | ಬೆರಳಚ್ಚು ಪರೀಕ್ಷೆ | 100 | 60 |
| 2 | ಸಂದರ್ಶನ | 20 | 10 |
| | **ಒಟ್ಟು** | **120 ಅಂಕಗಳು** | **70 ಅಂಕಗಳು** |

**(iii) ಬೆರಳಚ್ಚು ಪರೀಕ್ಷೆಯನ್ನು ನಡೆಸುವ ವಿಧಾನ:**

500 ಪದಗಳನ್ನು ಹೊಂದಿರುವ ಕಂಡಿಕೆಯನ್ನು 10 ನಿಮಿಷಗಳ ಕಾಲ ಉಕ್ತಲೇಖನ (dictation) ನೀಡಲಾಗುತ್ತದೆ ಮತ್ತು ಅಭ್ಯರ್ಥಿಗಳು ಉಕ್ತಲೇಖನ (dictation) ನೀಡಿದ ಕಂಡಿಕೆಯನ್ನು ಕಂಪ್ಯೂಟರ್‌ನಲ್ಲಿ 20 ನಿಮಿಷಗಳಲ್ಲಿ ಲಿಪ್ಯಂತರ ಮಾಡಬೇಕು.

**(iv) ಸಂದರ್ಶನ :**

ಬೆರಳಚ್ಚು ಪರೀಕ್ಷೆಯಲ್ಲಿ ಯಶಸ್ವಿಯಾದ ಅಭ್ಯರ್ಥಿಗಳನ್ನು, ಅರ್ಹತೆಯ ಕ್ರಮದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು ಮತ್ತು ಸಾಧ್ಯವಾದಷ್ಟು ಮಟ್ಟಿಗೆ, ಪ್ರತಿಯೊಂದು ವಿಭಾಗದಲ್ಲಿ ಖಾಲಿ ಹುದ್ದೆಗಳ ಸಂಖ್ಯೆಯ ಐದು ಪಟ್ಟು ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಸೂಚಿಸಲಾಗುತ್ತದೆ.

## ಭಾಗ – ಬಿ

## ಸಾಮಾನ್ಯ ಸೂಚನೆಗಳು

ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಮೊದಲು ಎಲ್ಲಾ ಸೂಚನೆಗಳನ್ನು ಎಚ್ಚರಿಕೆಯಿಂದ ಓದತಕ್ಕದ್ದು.

ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವಾಗ, ಅಭ್ಯರ್ಥಿಯು ಅರ್ಹತಾ ಮಾನದಂಡ ಮತ್ತು ಇತರೆ ಮಾನದಂಡಗಳನ್ನು ಪೂರೈಸಿದ್ದಾರೆಂದು ಖಚಿತಪಡಿಸಿಕೊಳ್ಳಬೇಕು. ಆನ್‌ಲೈನ್‌ನಲ್ಲಿ ಮಾಹಿತಿಯನ್ನು ಒದಗಿಸುವಾಗ ಅಭ್ಯರ್ಥಿಯು ಸಂಬಂಧಪಟ್ಟ ಅಂಕಪಟ್ಟಿಗಳು ಮತ್ತು ಶೈಕ್ಷಣಿಕ ಅರ್ಹತೆ / ಮೀಸಲಾತಿಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಹೊಂದಿರಬೇಕು.

**I.** ಅಭ್ಯರ್ಥಿಯು ಈ ಅಧಿಸೂಚನೆಯ ಅವಶ್ಯಕತೆಯಂತೆ ನಿರ್ದಿಷ್ಟ ವಿದ್ಯಾರ್ಹತೆಯನ್ನು ಸಮಾನವೆಂದು ಪರಿಗಣಿಸಬೇಕೆಂದರೆ, ಅಭ್ಯರ್ಥಿಯು ಈ ಸಂಬಂಧದ ಆದೇಶ / ಪತ್ರದ ಪ್ರತಿಯನ್ನು ಲಗತ್ತಿಸಿ ಜೊತೆಗೆ ಅದನ್ನು ಯಾವ ಪ್ರಾಧಿಕಾರದ ಅಡಿಯಲ್ಲಿ ಪರಿಗಣಿಸಲಾಗಿದೆ ಎಂಬುದನ್ನು ಸೂಚಿಸುವ ಸಂಬಂಧಿತ ಅರ್ಹತಾ ಪತ್ರದೊಂದಿಗೆ

(ಸಂಖ್ಯೆ ಮತ್ತು ದಿನಾಂಕದೊಂದಿಗೆ) ಅಪ್‌ಲೋಡ್ ಮಾಡತಕ್ಕದ್ದು. ಅದು ಸ್ಥಳೀಯ ಭಾಷೆಯಲ್ಲಿದ್ದರೆ, ಪ್ರಮಾಣೀಕರಿಸಲಾದ ಇಂಗ್ಲೀಷ್ ಅಥವಾ ಕನ್ನಡ ಅನುವಾದಿತ ಪ್ರತಿಯನ್ನು ಸಹ ಅಪ್‌ಲೋಡ್ ಮಾಡತಕ್ಕದ್ದು.

**II. ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವ ವಿಧಾನ :**

a. ಅಭ್ಯರ್ಥಿಯು ಆನ್‌ಲೈನ್ ಮೂಲಕ ಅರ್ಜಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ https://judiciary.karnataka.gov.in ವೆಬ್‌ಸೈಟ್‌ನಲ್ಲಿ ಸಲ್ಲಿಸತಕ್ಕದ್ದು.

**ಸೂಚನೆ: ಆನ್‌ಲೈನ್ ಹೊರತುಪಡಿಸಿ ಬೇರೆ ಯಾವುದೇ ವಿಧಾನದಿಂದ ಕಳುಹಿಸಲಾದ / ಸಲ್ಲಿಸಲಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.**

b. ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಅಗತ್ಯವಿರುವ ಮಾಹಿತಿಯನ್ನು ಭರ್ತಿ ಮಾಡಿ, ಉಲ್ಲೇಖಿಸಲಾದ ಸೂಚನೆಗೆ ಅನುಗುಣವಾಗಿ ಶುಲ್ಕವನ್ನು ಪಾವತಿಸತಕ್ಕದ್ದು. ಆನ್‌ಲೈನ್ ಅರ್ಜಿಯನ್ನು ಅಂತಿಮವಾಗಿ ಸಲ್ಲಿಸುವ ಮೊದಲು ಅಭ್ಯರ್ಥಿಯು ಭರ್ತಿ ಮಾಡಿದ ವಿವರಗಳು ಎಲ್ಲಾ ರೀತಿಯಲ್ಲೂ ಸರಿಯಾಗಿವೆಯೇ ಎಂದು ಖಚಿತಪಡಿಸಿಕೊಳ್ಳತಕ್ಕದ್ದು. ಒಮ್ಮೆ ಸಲ್ಲಿಸಿದ ಅರ್ಜಿಯನ್ನು ಹಿಂಪಡೆಯಲು ಅಥವಾ ಮಾರ್ಪಡಿಸಲು ಅವಕಾಶವಿರುವುದಿಲ್ಲ.

c. ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಸಂಬಂಧಿತ ಕಾಲಂಗಳಲ್ಲಿ ಸಂವಹನಕ್ಕಾಗಿ ಕಡ್ಡಾಯವಾಗಿ ಅವನ / ಅವಳ ಚಾಲ್ತಿಯಲ್ಲಿರುವ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ಐಡಿ ಯನ್ನು ಒದಗಿಸಬೇಕು. ತಪ್ಪಾದ ಮಾಹಿತಿಯನ್ನು ಒದಗಿಸಿದಲ್ಲಿ, ಎಸ್‌ಎಂಎಸ್ ಅಥವಾ ಇ–ಮೇಲ್ ಮುಖಾಂತರ ಸೂಚನೆ / ಸಂದೇಶಗಳು ಅಭ್ಯರ್ಥಿಗಳಿಗೆ ತಲುಪದಿರುವುದಕ್ಕೆ ಈ ಪ್ರಾಧಿಕಾರವು ಜವಾಬ್ದಾರರಾಗಿರುವುದಿಲ್ಲ.

d. ಅಭ್ಯರ್ಥಿಯು ತನ್ನ ಇತ್ತೀಚಿನ ಪಾಸ್‌ಪೋರ್ಟ್ ಗಾತ್ರದ ಶ್ವೇತ ವರ್ಣದ ಹಿನ್ನಲೆಯುಳ್ಳ ಛಾಯಾಚಿತ್ರವನ್ನು ಸ್ಕ್ಯಾನ್ ಮಾಡಬೇಕು (5 ಸೆ.ಮೀ. ಉದ್ದ X 3.5 ಸೆ.ಮೀ. ಅಗಲ ಮತ್ತು ಗರಿಷ್ಠ 50 ಕೆಬಿ ಗಾತ್ರ) ಮತ್ತು ಕಪ್ಪು ಬಾಲ್ ಪಾಯಿಂಟ್ ಪೆನ್‌ನಲ್ಲಿ ಬಿಳಿ ಕಾಗದದ ಮೇಲೆ ಸಹಿಯನ್ನು (2.5 ಸೆ.ಮೀ. ಉದ್ದ X 7.5 ಸೆ.ಮೀ. ಅಗಲ ಮತ್ತು ಗರಿಷ್ಠ 25 ಕೆಬಿ ಗಾತ್ರ) jpg ಸ್ವರೂಪದಲ್ಲಿ ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಅಪ್‌ಲೋಡ್ ಮಾಡತಕ್ಕದ್ದು. jpg ಚಿತ್ರಗಳು ಸ್ಪಷ್ಟವಾಗಿ ಕಾಣುವಂತಿರಬೇಕು. ಹಾಗೆ ಇಲ್ಲದಿದ್ದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

e. ಅಭ್ಯರ್ಥಿಯು ಈ ಕೆಳಗಿನ ದಾಖಲೆಗಳನ್ನು ಸಂದರ್ಭಾನುಸಾರ ಅಪ್‌ಲೋಡ್ ಮಾಡಬೇಕು.

(i) ಎಸ್.ಎಸ್.ಎಲ್.ಸಿ. ಅಂಕಪಟ್ಟಿ (ಜನ್ಮ ದಿನಾಂಕದ ಆಧಾರಕ್ಕಾಗಿ)

(ii) ವಿಜ್ಞಾನ / ಕಲೆ / ವಾಣಿಜ್ಯ / ವ್ಯವಹಾರ ನಿರ್ವಹಣೆ (Business Management) / ಕಂಪ್ಯೂಟರ್ ಅಪ್ಲಿಕೇಷನ್ಸ್ ವಿಷಯಗಳಲ್ಲಿ ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯದಿಂದ ಪಡೆದ ಪದವಿಯ ಅಂಕಪಟ್ಟಿಗಳು, ಸೆಮಿಸ್ಟರ್ಸ್ ಆದಲ್ಲಿ I ರಿಂದ VI ಸೆಮಿಸ್ಟರ್ಸ್ ಅಥವಾ I ರಿಂದ III ವರ್ಷಗಳ ಅಂಕಪಟ್ಟಿ ಜೊತೆಗೆ ಘಟಿಕೋತ್ಸವದ / ತಾತ್ಕಾಲಿಕ ಪದವಿ ಪ್ರಮಾಣ ಪತ್ರ.

(iii) ಲ್ಯಾಟರಲ್ ಪ್ರವೇಶದಲ್ಲಿ ಪದವಿಯನ್ನು ಪಡೆದಿದ್ದರೆ, ಘಟಿಕೋತ್ಸವದ / ತಾತ್ಕಾಲಿಕ ಪ್ರಮಾಣ ಪತ್ರದೊಂದಿಗೆ ಡಿಪ್ಲೋಮದಲ್ಲಿ ಕಮರ್ಷಿಯಲ್ ಪ್ರಾಕ್ಟೀಸ್ / ಸೆಕ್ರೆಟೇರಿಯಲ್ ಪ್ರಾಕ್ಟೀಸ್ ಅಂಕಪಟ್ಟಿ – ಸೆಮಿಸ್ಟರ್ಸ್ ಆದಲ್ಲಿ I ರಿಂದ VI ಸೆಮಿಸ್ಟರ್ಸ್ ಅಥವಾ I ರಿಂದ III ವರ್ಷಗಳ ಅಂಕಪಟ್ಟಿ.

(iv) ಆಂಗ್ಲ ಮತ್ತು ಕನ್ನಡ ಬೆರಳಚ್ಚು ಪ್ರೌಢ ದರ್ಜೆ ಪರೀಕ್ಷೆಯ ಪ್ರಮಾಣ ಪತ್ರ.

(v) ಜಾತಿ ಮತ್ತು ಆದಾಯ ಪ್ರಮಾಣಪತ್ರ, ಅನ್ವಯಿಸಿದರೆ ಮಾತ್ರ.

(vi) ಇತರೆ ಮೀಸಲಾತಿಗಳು i.e., ಗ್ರಾಮೀಣ I ರಿಂದ X ತರಗತಿಯವರೆಗೆ ವ್ಯಾಸಂಗ ಮಾಡಿದ ಪ್ರಮಾಣ ಪತ್ರ, ಅಂಗವಿಕಲ ಪ್ರಮಾಣ ಪತ್ರ.

ಸ್ಕ್ಯಾನ್ ಮಾಡಿದ ದಾಖಲೆಗಳನ್ನು ಪಿಡಿಎಫ್ ನಮೂನೆಯಲ್ಲಿ ಮಾತ್ರ ಅಪ್‌ಲೋಡ್ ಮಾಡತಕ್ಕದ್ದು ಮತ್ತು ಓದಲು ಸ್ಪಷ್ಟವಾಗಿರಬೇಕು.

**ಸೂಚನೆ:** ಅಭ್ಯರ್ಥಿಯು ಆನ್‌ಲೈನ್ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಮೇಲೆ ಹೇಳಲಾದ ಯಾವುದೇ ಪ್ರಮಾಣಪತ್ರಗಳನ್ನು ಅಪ್‌ಲೋಡ್ ಮಾಡಲು ವಿಫಲರಾದಲ್ಲಿ, ನಂತರ ಸ್ವೀಕರಿಸಲಾಗುವುದಿಲ್ಲ.

f. ಆನ್‌ಲೈನ್ ಅರ್ಜಿಯನ್ನು ಅಂತಿಮವಾಗಿ ಸಲ್ಲಿಸುವ ಮೊದಲು, ಅಭ್ಯರ್ಥಿಯು ಸರಿಯಾಗಿ ಭರ್ತಿ ಮಾಡಿದ ಅರ್ಜಿಯನ್ನು ಪೂರ್ವವೀಕ್ಷಿಸಲು (Preview) ಸಾಧ್ಯವಾಗುತ್ತದೆ. ಅಭ್ಯರ್ಥಿಯು ಭರ್ತಿ ಮಾಡಿದ ಅರ್ಜಿಯನ್ನು ದಾಖಲೆಗಾಗಿ ಮುದ್ರಿಸಿಟ್ಟುಕೊಳ್ಳತಕ್ಕದ್ದು.

g. ಅಭ್ಯರ್ಥಿಯು ಕರ್ನಾಟಕ ಉಚ್ಚ ನ್ಯಾಯಾಲಯದ ವೆಬ್‌ಸೈಟ್‌ನಲ್ಲಿ ಒದಗಿಸಲಾಗುವ ಲಿಂಕ್‌ನಿಂದ ಸೂಚನಾ / ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಲು ಮತ್ತು ಬೆರಳಚ್ಚು ಪರೀಕ್ಷೆಗೆ / ಸಂದರ್ಶನಕ್ಕೆ ಅರ್ಹತೆಯ ಕುರಿತು ಮಾಹಿತಿಗಾಗಿ ತಮ್ಮ ಅರ್ಜಿ ಸಂಖ್ಯೆಯನ್ನು ಜಾಗರೂಕತೆಯಿಂದ ಇಟ್ಟುಕೊಳ್ಳತಕ್ಕದ್ದು.

h. (i) ಅಭ್ಯರ್ಥಿಗಳು ಕರ್ನಾಟಕ ಉಚ್ಚ ನ್ಯಾಯಾಲಯದ ಜಾಲತಾಣದ ನೇಮಕಾತಿ ಅಧಿಸೂಚನೆ ವಿಭಾಗಕ್ಕೆ ನಿಯಮಿತವಾಗಿ ಭೇಟಿ ನೀಡಿ ದತ್ತಾಂಶ ನಮೂದು ಸಹಾಯಕರ ಹುದ್ದೆಗಳ ಕುರಿತಾದ ಮಾಹಿತಿಯನ್ನು ಪಡೆಯತಕ್ಕದ್ದು.

(ii) ಬೆರಳಚ್ಚು ಪರೀಕ್ಷೆಗೆ / ಸಂದರ್ಶನಕ್ಕೆ ಆಯ್ಕೆ ಮಾಡಲಾಗುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗುತ್ತದೆ – https://judiciary.karnataka.gov.in. ಇದಲ್ಲದೆ, ಬೆರಳಚ್ಚು ಪರೀಕ್ಷೆ / ಸಂದರ್ಶನಕ್ಕಾಗಿ ಸೂಚನಾ ಪತ್ರವನ್ನು ಡೌನ್‌ಲೋಡ್ ಮಾಡಲು ಲಿಂಕ್ ಅನ್ನು ಒದಗಿಸಲಾಗುತ್ತದೆ.

i. ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಅಭ್ಯರ್ಥಿಯು ಕಡೆಯದಾಗಿ ಸಲ್ಲಿಸಿದ ಅರ್ಜಿಯನ್ನು ಮಾತ್ರ ಪರಿಗಣಿಸಲಾಗುತ್ತದೆಂಬುದನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು. **ಕೊನೆಯ ಅರ್ಜಿಯನ್ನು ಬಿಟ್ಟು ಬೇರೆ ಯಾವುದೇ ಅರ್ಜಿ ಪರಿಗಣಿಸಲು, ಸಲ್ಲಿಸುವ ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ.**

j. ಬೆರಳಚ್ಚು ಪರೀಕ್ಷೆಗೆ / ಸಂದರ್ಶನಕ್ಕೆ ಕರೆಯಲಾಗುವ ಅಭ್ಯರ್ಥಿಗಳು, ಕರ್ನಾಟಕ ಉಚ್ಚ ನ್ಯಾಯಾಲಯವು ನಿಗದಿಪಡಿಸುವ ಸ್ಥಳ ಹಾಗೂ ಸಮಯಕ್ಕೆ ತಮ್ಮ ಸ್ವಂತ ಖರ್ಚಿನಲ್ಲೇ ಹಾಜರಾಗತಕ್ಕದ್ದು.

## III. ಮೀಸಲಾತಿ ಕೋರುವ ಅಭ್ಯರ್ಥಿಗಳು:

| | | |
|---|---|---|
| ಜಾತಿ ಮೀಸಲಾತಿ ಕೋರುವ ಬಗ್ಗೆ | (1) | ಅಭ್ಯರ್ಥಿಯು ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕದಂದು ನಿಗದಿತ ನಮೂನೆಯಲ್ಲಿ ಪ್ರಮಾಣಪತ್ರವನ್ನು ಹೊಂದಿರಬೇಕು ಮತ್ತು ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕು. ವಿಫಲವಾದರೆ, ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. |

| | | | |
|---|---|---|---|
| | (2) | ಜಾತಿ ಪ್ರಮಾಣಪತ್ರದ ನಿಗದಿತ ನಮೂನೆ: | |
| | | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು | ನಮೂನೆ – ಡಿ |
| | | ಪ್ರವರ್ಗ–I ಕ್ಕೆ ಸೇರಿದ ಅಭ್ಯರ್ಥಿಗಳು | ನಮೂನೆ – ಇ |
| | | ಪ್ರವರ್ಗ– II(A)/ II(B)/ III(A)/ III(B) ಗೆ ಸೇರಿದ ಅಭ್ಯರ್ಥಿಗಳು | ನಮೂನೆ – ಎಫ್ |
| | (3) | ಪರಿಶಿಷ್ಟ ಜಾತಿಯ ಅಡಿಯಲ್ಲಿ ಮೀಸಲಾತಿ ಕೋರುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಇತ್ತೀಚಿನ ಜಾತಿ ಪ್ರಮಾಣಪತ್ರವನ್ನು [ಅಂದರೆ ಪರಿಶಿಷ್ಟ ಜಾತಿ (ಪ್ರವರ್ಗ – ಎ), (ಪ್ರವರ್ಗ – ಬಿ) ಮತ್ತು (ಪ್ರವರ್ಗ – ಸಿ] ಹೊಂದಿರಬೇಕು. | |
| ಸೂಚನೆ: ಉದ್ಯೋಗಕ್ಕಾಗಿ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಮಾತ್ರ ಪರಿಗಣಿಸಲಾಗುವುದು. ಶಿಕ್ಷಣ ಅಥವಾ ಇತರೆ ಸೌಲಭ್ಯಗಳಿಗೆ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. | | | |

## IV. ಇತರೆ ಮೀಸಲಾತಿಗಳು:

| | | |
|---|---|---|
| ಗ್ರಾಮೀಣ ಮೀಸಲಾತಿ | (1) | ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಗ್ರಾಮೀಣ ಪ್ರದೇಶದಲ್ಲಿ 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿರಬೇಕು. |
| | (2) | ಸಾಮಾನ್ಯ ಅರ್ಹತೆಗೆ ಸೇರಿದ ಮತ್ತು ಗ್ರಾಮೀಣ ಮೀಸಲಾತಿಯನ್ನು ಪಡೆಯಲು ಬಯಸುವ ಅಭ್ಯರ್ಥಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಯಿಂದ ಮೇಲುರುಜು ಮಾಡಲಾದ ನಮೂನೆ 2 ರಲ್ಲಿ ಪ್ರಮಾಣಪತ್ರವನ್ನು ಮತ್ತು ಸಂಬಂಧಪಟ್ಟ ತಹಶೀಲ್ದಾರ್ ನೀಡಿದ ಕೆನೆಪದರಕ್ಕೆ ಸೇರಿದವರಲ್ಲ ಎಂದು ಹೇಳುವ ನಮೂನೆ 1 ರಲ್ಲಿ ಪ್ರಮಾಣಪತ್ರವನ್ನು ಸಲ್ಲಿಸಬೇಕು. ಈ ಪ್ರಮಾಣಪತ್ರಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಮಾನ್ಯವಾಗಿರತಕ್ಕದ್ದು. |
| | (3) | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ–I / ಪ್ರವರ್ಗ– II(A) / II(B)/ III(A)/ III(B) ಗಳಿಗೆ ಸೇರಿದ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿಯನ್ನು ಪಡೆಯಲು ಕಡ್ಡಾಯವಾಗಿ ನಮೂನೆ–2 ರಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಯಿಂದ ಸಹಿ ಮಾಡಲಾದ ಪ್ರಮಾಣಪತ್ರವನ್ನು ಸಲ್ಲಿಸಬೇಕು ಮತ್ತು ಅದು ಅಧಿಸೂಚನೆಯ ಕೊನೆಯ ದಿನಾಂಕದಂದು ಮಾನ್ಯವಾಗಿರತಕ್ಕದ್ದು. ಯಾವುದೇ ಅಭ್ಯರ್ಥಿಯು ಅದನ್ನು ಸಲ್ಲಿಸಲು ವಿಫಲವಾದರೆ, ಅಂತಹ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿಯನ್ನು ಪಡೆಯಲು ಅನರ್ಹರಾಗುತ್ತಾರೆ. |
| ಅಂಗವಿಕಲ ಅಭ್ಯರ್ಥಿ ಮೀಸಲಾತಿ | ಅಂಗವಿಕಲ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಅಧಿಕೃತ ಜ್ಞಾಪಕ ಸಂಖ್ಯೆ ಸಿಆಸುಇ 115 ಸೇನೆನಿ 2005 ದಿನಾಂಕ 19.11.2005 ರ ಪ್ರಕಾರ ಅಧಿಸೂಚನೆಯ ಕೊನೆಯ ದಿನಾಂಕದಂದು ಸಂಬಂಧಪಟ್ಟ ಪ್ರಾಧಿಕಾರವು ನೀಡಿದ ಪ್ರಮಾಣಪತ್ರವನ್ನು ಹೊಂದಿರಬೇಕು. | |
| ಸೇವಾನಿರತ ಅಭ್ಯರ್ಥಿಗಳು | ಆಯ್ಕೆ ಪಟ್ಟಿ ಬಿಡುಗಡೆಯಾದ ತಕ್ಷಣ ನೇಮಕಾತಿ ಆದೇಶವನ್ನು ನೀಡುವ ಮೊದಲು ಸೇವಾನಿರತ ಅಭ್ಯರ್ಥಿಗಳು ನಿರಕ್ಷೇಪಣಾ ಪ್ರಮಾಣಪತ್ರವನ್ನು (NOC) ಈ ಕಚೇರಿಗೆ ಸಲ್ಲಿಸಬೇಕು. | |
| **ಸೂಚನೆ:** ಆನ್‌ಲೈನ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದ ನಂತರ ಪಡೆದ ಜಾತಿ ಪ್ರಮಾಣಪತ್ರ ಮತ್ತು ಇತರೆ ಮೀಸಲಾತಿಯ ಪ್ರಮಾಣಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. | | |

(i) ಅಭ್ಯರ್ಥಿಗಳು ಕೋರಿದ ಶೈಕ್ಷಣಿಕ ಅರ್ಹತೆ, ಜಾತಿ ಮತ್ತು ಇತರೆ ಮೀಸಲಾತಿಗಳಿಗೆ ಸಂಬಂಧಿಸಿದ ಅಪ್‌ಲೋಡ್ ಮಾಡಲಾದ ಮೂಲದಾಖಲಾತಿಗಳನ್ನು ಬೆರಳಚ್ಚು ಪರೀಕ್ಷೆ / ಸಂದರ್ಶನ / ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸಬೇಕು. ಯಾವುದೇ ಅಭ್ಯರ್ಥಿ ಬೆರಳಚ್ಚು ಪರೀಕ್ಷೆ / ಸಂದರ್ಶನ / ಪರಿಶೀಲನೆಯ ಸಮಯದಲ್ಲಿ ಅಪ್‌ಲೋಡ್ ಮಾಡಲಾದ ಮೂಲದಾಖಲಾತಿಗಳನ್ನು ಸಲ್ಲಿಸಲು ವಿಫಲರಾದರೆ, ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಗೊಳಿಸಿ ಸಾಮಾನ್ಯ ವರ್ಗದ ಅಡಿಯಲ್ಲಿ (ಅರ್ಹ ಅರ್ಜಿಗಳನ್ನು) ಮಾತ್ರ ಪರಿಗಣಿಸಲಾಗುತ್ತದೆ.

(ii) ಅಭ್ಯರ್ಥಿಗಳು ನಿಗದಿತವಲ್ಲದ ನಮೂನೆಯಲ್ಲಿ ಮೀಸಲಾತಿ ಪ್ರಮಾಣಪತ್ರವನ್ನು ಸಲ್ಲಿಸಿದರೆ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**V.** ಬೆರಳಚ್ಚು ಪರೀಕ್ಷೆ /ಸಂದರ್ಶನಕ್ಕೆ ಕರೆಯಲಾದ ಅಭ್ಯರ್ಥಿಗಳು ಸಂದರ್ಶನಕ್ಕೆ ಬರುವಾಗ ತಮ್ಮ ಸಂದರ್ಶನದ ಸೂಚನಾ ಪತ್ರದೊಂದಿಗೆ, ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್ ಅಥವಾ ಪ್ಯಾನ್ ಕಾರ್ಡ್ ಅಥವಾ ಪಡಿತರ ಚೀಟಿ ಅಥವಾ ಪಾಸ್‌ಪೋರ್ಟ್ ಅಥವಾ ಚಾಲನಾ ಪರವಾನಗಿಯನ್ನು ಭಾಗ ಬಿ –II (e) ನಲ್ಲಿ ಉಲ್ಲೇಖಿಸಿರುವ ಮೀಸಲಾತಿ ದಾಖಲೆಗಳೊಂದಿಗೆ ಹಾಜರುಪಡಿಸಬೇಕು.

**VI.** ಮೂರು ನಡತೆ ಪ್ರಮಾಣಪತ್ರಗಳು ಅಂದರೆ,

a) ಅಭ್ಯರ್ಥಿಯು ಪದವಿ ಪೂರ್ಣಗೊಳಿಸಿದ ಸಂಸ್ಥೆಯ ಮುಖ್ಯಸ್ಥರಿಂದ ವಿದ್ಯಾಭ್ಯಾಸದ ವಿವರಗಳೊಂದಿಗೆ ಪಡೆದ ಒಂದು ಪ್ರಮಾಣಪತ್ರ.

ಮತ್ತು

b) ಸಂಬಂಧಿಕರಲ್ಲದ ಆದರೆ ಅಭ್ಯರ್ಥಿಯೊಂದಿಗೆ ಚೆನ್ನಾಗಿ ಪರಿಚಿತರಾಗಿರುವ ಇಬ್ಬರು ಗೌರವಾನ್ವಿತ ವ್ಯಕ್ತಿಗಳಿಂದ ಪಡೆದ ಎರಡು ಪ್ರಮಾಣಪತ್ರಗಳು.

**VII.** ಆನ್‌ಲೈನ್ ಅರ್ಜಿಯಲ್ಲಿ ಮತ್ತು ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಸಲ್ಲಿಸಿದ ಮೂಲ ದಾಖಲೆಗಳಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದರೆ, ಅಭ್ಯರ್ಥಿಯು ತನ್ನ ಉಮೇದುವಾರಿಕೆಯನ್ನು ರದ್ದುಗೊಳಿಸಲು ಹೊಣೆಗಾರನಾಗಿರುತ್ತಾನೆ/ಳೆ.

**VIII.** ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಲಾದ ವರ್ಗ / ಮೀಸಲಾತಿಗಳು ಅಂತಿಮವಾಗಿರುತ್ತದೆ. ನಂತರ ಬದಲಾವಣೆ ಕೋರಿದ್ದಲ್ಲಿ ಅಂತಹ ಕೋರಿಕೆಗಳನ್ನು ಯಾವುದೇ ಸಂದರ್ಭದಲ್ಲಿಯೂ ಪರಿಗಣಿಸಲಾಗುವುದಿಲ್ಲ.

**IX.** ಬೆರಳಚ್ಚು ಪರೀಕ್ಷೆ /ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ನೇಮಕಾತಿಗೆ ಯಾವುದೇ ಹಕ್ಕನ್ನು ನೀಡಿದಂತಾಗುವುದಿಲ್ಲ ಮತ್ತು ಅಭ್ಯರ್ಥಿಯು ನೇಮಕಕ್ಕೆ ಎಲ್ಲಾ ರೀತಿಯಲ್ಲಿ ಸೂಕ್ತ ಎಂದು, ಅಗತ್ಯವೆಂದು ಪರಿಗಣಿಸಬಹುದಾದ ವಿಚಾರಣೆಗಳ ನಂತರ ಕರ್ನಾಟಕ ಉಚ್ಚ ನ್ಯಾಯಾಲಯವು ತೃಪ್ತಿ ಹೊಂದದ ಹೊರತು ಯಾವುದೇ ಅಭ್ಯರ್ಥಿಯನ್ನು ಹುದ್ದೆಗೆ ನೇಮಿಸಲಾಗುವುದಿಲ್ಲ.

**X.** ದತ್ತಾಂಶ ನಮೂದು ಸಹಾಯಕರ ಹುದ್ದೆಗೆ ನೇಮಕಗೊಂಡ ಅಭ್ಯರ್ಥಿಗಳನ್ನು ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರಿನಲ್ಲಿನ ಪ್ರಧಾನ ಪೀಠದಲ್ಲಾಗಲೀ ಅಥವಾ ಧಾರವಾಡ ಅಥವಾ ಕಲಬುರಗಿಗಳಲ್ಲಿನ ಪೀಠಗಳಲ್ಲಾಗಲೀ ನಿಯೋಜಿಸಲಾಗುವುದು.

**XI.** ಅಭ್ಯರ್ಥಿಯು ಯಾವುದೇ ಸಿಬ್ಬಂದಿ ಅಥವಾ ಸಿಬ್ಬಂದಿಯೇತರರ ಮೂಲಕ ಉಮೇದುವಾರಿಕೆಗಾಗಿ ಯಾವುದೇ ವಿಧಾನದಿಂದ ಬಾಹ್ಯ ಬೆಂಬಲವನ್ನು ಪಡೆಯಲು ಪ್ರಯತ್ನಿಸಿದರೆ, ಅವರು ನೇಮಕಾತಿಗೆ ಅನರ್ಹರಾಗಿರುವುದಿಲ್ಲ.

**XII.** ಈ ಅಧಿಸೂಚನೆಯು ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ನಡುವೆ ಯಾವುದೇ ಅಸಂಗತತೆ ಉಂಟಾದರೆ, ಇಂಗ್ಲೀಷ್ ಆವೃತ್ತಿಯು ಮಾನ್ಯವಾಗಿರುತ್ತದೆ.

**XIII.** ಪರಿಶೀಲನೆಯ ಯಾವುದೇ ಸಮಯದಲ್ಲಿ ಅಥವಾ ನೇಮಕಾತಿಯ ಯಾವುದೇ ಹಂತದಲ್ಲಿ, ಅಭ್ಯರ್ಥಿಯು ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ಸುಳ್ಳು ಎಂದು ಕಂಡುಬಂದಲ್ಲಿ ಅಥವಾ ಅಭ್ಯರ್ಥಿಯು ಯಾವುದೇ ಅರ್ಹತಾ ಮಾನದಂಡಗಳನ್ನು ಪೂರೈಸದಿದ್ದಲ್ಲಿ ಅಥವಾ ಅಭ್ಯರ್ಥಿಯು ಯಾವುದೇ ವಸ್ತುನಿಷ್ಠ ಸತ್ಯಗಳನ್ನು ತಿರುಚಿದರೆ ಅಥವಾ ಮೊಟಕುಗೊಳಿಸಿದರೆ, ಅಭ್ಯರ್ಥಿಯ ಉಮೇದುವಾರಿಕೆಯನ್ನು ರದ್ದುಗೊಳಿಸಲಾಗುತ್ತದೆ. ನೇಮಕಾತಿಯ ನಂತರವೂ ಅಂತಹ ಯಾವುದೇ ನ್ಯೂನತೆಗಳು ಕಂಡುಬಂದರೆ, ಅಭ್ಯರ್ಥಿಯ ನೇಮಕಾತಿಯನ್ನು ಕೊನೆಗೊಳಿಸಲಾಗುವುದು. ತಪ್ಪು, ಅಪೂರ್ಣ ಅಥವಾ ತಪ್ಪಾದ ಮಾಹಿತಿಯನ್ನು ಒದಗಿಸುವುದು ಅಭ್ಯರ್ಥಿಯ ಅನರ್ಹತೆಗೆ ಕಾರಣವಾಗುವುದಲ್ಲದೆ ಅಂತಹ ಮಾಹಿತಿಯನ್ನು ಒದಗಿಸಿದ್ದಕ್ಕಾಗಿ ಕ್ರಿಮಿನಲ್ ಮೊಕದ್ದಮೆಗೆ ಹೊಣೆಗಾರರಾಗುತ್ತಾರೆ.

**ಗೌರವಾನ್ವಿತ ಮುಖ್ಯ ನ್ಯಾಯಮೂರ್ತಿಗಳ ಆದೇಶಾನುಸಾರ,**

**ಸಹಿ/-**
**(ಎಂ. ಚಂದ್ರಶೇಖರ್ ರೆಡ್ಡಿ)**
**ಮಹಾವಿಲೇಖನಾಧಿಕಾರಿ**

**PR-495**

## HIGH COURT OF KARNATAKA, BENGALURU

## NOTIFICATION

## No: HCRB/DEA-7/2026 (KKR) DATED 29TH JUNE 2026

## DIRECT RECRUITMENT OF THE CANDIDATES TO THE POST OF DATA ENTRY ASSISTANT

## UNDER KALYANA KARNATAKA REGION

## LAST DATE FOR SUBMISSION OF APPLICATION THROUGH ONLINE: 28TH JULY 2026

It is hereby notified that applications are invited through online from the eligible candidates who fulfil the essential qualifications and other eligibility conditions as on the last date fixed for submission of applications for recruitment to 7 Posts (including 5 Backlog Posts) of Data Entry Assistant under Kalyana Karnataka Region on the Establishment of the High Court of Karnataka, Bengaluru by way of Direct Recruitment through online link i.e., https://judiciary.karnataka.gov.in.

## PART-A

1. **Classification of vacancies:**

**7 POSTS UNDER KALYANA KARNATAKA REGION (INCLUDING 5 BACKLOG POSTS)**

| Category | Un-reserved | Women Candidate | Rural Candidate | Kannada Medium Student | Persons with Benchmark Disability | Persons Displaced from Project | Ex-servicemen | Transgender | TOTAL |
|---|---|---|---|---|---|---|---|---|---|
| General Merit | 1 | - | - | - | - | - | - | - | 1 |
| Scheduled Caste | 1 | - | 1* | - | - | - | - | - | 1 + 1* |
| Scheduled Tribe | 1* | 1* | - | - | - | - | - | - | 2* |
| Category – I | - | 1* | - | - | - | - | - | - | 1* |
| Category – II (A) | - | 1* | - | - | - | - | - | - | 1* |
| Category – II (B) | - | - | - | - | - | - | - | - | - |
| Category – III (A) | - | - | - | - | - | - | - | - | - |
| Category – III (B) | - | - | - | - | - | - | - | - | - |
| TOTAL | 2 + 1* | 3* | 1* | - | - | - | - | - | 2 + 5* |

Note:

1. (*) Indicates backlog vacancies.
2. The above classification is made on the basis of Government Order Nos. SWD 515 PKV 2026 dated 08.05.2026, DPAR 02 SeHiMa 2026 dated 13.05.2026 and 25.05.2026.

**2. <u>Scale of Pay</u>:**

₹25500 – 81100 (Level - 4) with admissible allowances.

**3. <u>Method of Recruitment</u>:**

Selection of candidates will be made in accordance with

a) The High Court of Karnataka Service (Conditions of Service and Recruitment) Rules, 1973 as amended from time to time,

b) The High Court of Karnataka Service (Direct Recruitment by Selection) Rules, 1984 as amended from time to time,

c) The Karnataka Civil Services (General Recruitment) Rules, 1977,

d) The Karnataka Scheduled Castes, Scheduled Tribes and Other Backward Classes (Reservation of Appointment etc.) Act, 1990,

e) The Karnataka Scheduled Castes, Scheduled Tribes and Other Backward Classes (Reservation of Appointment, etc.) Rules, 1992.

f) The Government Circulars/Notification as under:

| Sl. No. | Government Notification/Circular | Date | Subject |
|---|---|---|---|
| 1. | DPAR 262 SRR 2025 | 29.01.2026 | Providing Age Relaxation of 5 years (as a one time measure) |
| 2. | DPAR 08 SRR 2001 | 13.02.2001 | Regarding candidates claiming Rural Reservation |
| 3. | DPAR 19 SRR 2020 | 12.10.2020 | Regarding No Objection Certificate (NOC) in respect of In-service candidates. |

**4. <u>Eligibility Criteria</u>:**

**(a) Qualification:**

**I)** Must have passed Bachelor Degree in Science / Arts / Commerce / Business Management / Computer Applications of a recognized University with minimum of 55% marks in the aggregate for candidates belonging to General Category and Other Backward Categories and a minimum of 50% marks in the aggregate for candidates belonging to Scheduled Caste and Scheduled Tribes.

**AND**

**II)** Must have passed Senior Grade Typewriting examination in English and Kannada with knowledge of operation of Computers.

Note: Knowledge of operation of computers means possessing a certificate in computer basics issued by an Institute imparting Computer education.

**(b) Age limit:**

A candidate applying to the said post shall not be less than 18 years of age and the maximum age limit in respect of candidates belonging to the following categories is as under:

| Candidates belonging to | Maximum age Limit |
|---|---|
| General Merit | 40 years |
| Category - II(A) / II(B) / III(A) / III(B) of Other Backward Classes | 43 years |
| Scheduled Caste / Scheduled Tribe / Category – I of Other Backward Classes | 45 years |

5. **Application fee**:

The candidates shall pay the Application fee through State Bank of India online payment gateway as mentioned in the online application.

The fee prescribed for the candidates is as under:

| Candidates belonging to | Application Fee |
|---|---|
| General Merit | ₹350/- |
| Category - II(A) / II(B) / III(A)/ III(B) of Other Backward Classes | ₹350/- |
| Scheduled Caste/ Scheduled Tribe/ Category-I of Other Backward Classes/Persons with Benchmark Disability. | ₹200/- |

**Note:**

1. Candidates must note that fee once paid will not be refunded under any circumstances even in case where fee has been paid for more than one application.
2. To avoid last minute rush, the candidates are advised to submit the application through online well in advance.
3. The candidates can submit the application and make payment of application fee round the clock, till 11.59 p.m. of 28.07.2026.
4. The applications which do not fulfil the requirements shall be rejected.
5. The candidates who are called for Typing Test and Interview, as the case may be, will be informed in this regard.

6. **Probation:**

A candidate who is selected and appointed will initially be on probation for a period of two years or for extended period, if necessary.

7. **Mode of Selection:**

**(i) Listing of candidates for Typing Test:**

Listing of candidates for Typing Test for recruitment to the post of Data Entry Assistant will be on the basis of the percentage of total marks secured in the qualifying examination in the order of merit, and if two or more candidates have secured equal percentage of total marks in the qualifying examination, the order of merit in respect of such candidates shall be fixed on the basis of their age. From among the candidates whose names are included in such list, as far as may be such number of

candidates as is equal to ten times the number of vacancies notified, selected in the order of merit, will be called for the Typing Test.

**(ii)** The Selection to the post of Data Entry Assistant will be made on the basis of performance in the Typing Test and Interview as under:

| Sl. No. | Particulars | Maximum Marks | Minimum Marks for passing the test |
|---|---|---|---|
| 1. | Typing Test | 100 | 60 |
| 2. | Interview | 20 | 10 |
| | **Grand Total** | **120 Marks** | **70 Marks** |

**(iii) Procedure prescribed for conducting the Typing Test:**

A passage containing 500 words will be dictated for a duration of 10 minutes and the candidates shall transcribe the dictated passage within 20 minutes in the Computer.

**(iv) Interview:**

The candidates will be called for Interview in the order of merit from among the successful candidates in the Typing Test and as far as may be, such number of candidates as is equal to five times the number of vacancies notified in each respective category.

## PART-B

### General Instructions:

The candidates shall read all the instructions carefully before submitting the online application.

While submitting application through online, the candidate shall ensure that he/she fulfils the eligibility criteria and other norms. The candidates shall possess all the relevant Marks Cards and documents relating to Educational Qualification /reservations claimed before applying.

**I.** If a candidate is claiming particular qualification as equivalent as per the requirement of this Notification, then the candidate is required to attach and upload copy of the order/letter alongwith the relevant qualification indicating the Authority (with number and date) under which it has been so treated. If the same is in vernacular language, a translated copy either in English or in Kannada, duly certified, shall also be uploaded.

**II. Procedure for submitting application through online:**

a. The candidate shall submit the application through online by visiting the official website of High Court of Karnataka i.e., https://judiciary.karnataka.gov.in.

**Note: Applications sent / submitted by any mode other than online will not be considered.**

b. The candidate is required to fill up the data while submitting the online application and payment of fee shall be made in accordance with the instructions. The candidate should ensure that the particulars filled in are correct in all aspects before final submission of the online application. Application once submitted cannot be withdrawn or modified.

c. The candidate shall provide the Mobile number and valid Email ID mandatorily at relevant columns for the purpose of communication while submitting online application. The authority is not responsible for non-receipt of SMS or Email due to furnishing of incorrect information (i.e., invalid Mobile number and E-mail).

d. The candidate shall scan the latest passport size photograph with white background (having 5 cm of length X 3.5 cm of breadth with max. size 50kb) and signature on white paper in black ball point pen (having 2.5 cm of length X 7.5 cm of breadth with max. size 25kb) in jpg format and upload the same, while submitting the online application. The jpg images must be clear and visible, else the application will not be considered.

e. The candidate shall upload the following documents/testimonials as the case may be:

i) SSLC Marks Card (as proof of Date of Birth),

ii) Bachelor Degree in Science / Arts / Commerce / Business Management / Computer Applications of a recognized University I to VI Semesters Marks Cards or I to III years Marks Cards along with Convocation/Provisional Degree Certificate.

iii) Diploma in Commercial Practice / Secretarial practice I to VI Semesters or I to III years marks cards along with Convocation / Provisional Certificate, if Bachelor degree is pursued on lateral entry.

iv) English and Kannada Senior Grade Typewriting Certificate.

v) Caste Certificate and Income certificate, if applicable.

vi) Other Reservations i.e., Rural Certificate of 1 to 10th standard and Kalyana Karnataka Region (371J) Certificate.

The scanned documents shall be uploaded in PDF format only and must be clear and legible.

**Note:** If any candidate fails to upload any of the above said documents at the time of submission of online application, later submission will not be considered.

f. Before final submission of online application, the candidate will be able to preview the duly filled application. Candidate is advised to take printout of the filled application for his/her record.

g. The candidate should retain the application number carefully for generation of Intimation Letter from the link provided on the website of High Court of Karnataka and for any other information regarding his / her eligibility for Typing Test and Interview.

h. (i) Candidates are advised to visit website of High Court of Karnataka for updates regarding the recruitment to the post of Data Entry Assistants at regular intervals.

(ii) The list of eligible candidates for Typing Test and Interview will be published on the website of High Court of Karnataka i.e., https://judiciary.karnataka.gov.in. Further, a link will be provided for downloading the Intimation for Typing Test/Interview.

i. In case the candidate submits more than one online application, the candidate must note that the application last submitted will only be entertained. **No correspondence request to accept previous application(s) will be entertained.**

j. The candidates called for Typing Test and Interview will have to appear at their own cost at the place and time notified by High Court of Karnataka.

**III. Candidates Claiming Reservations**:

| | |
|---|---|
| Kalyana Karnataka Region (Local Cadre) | The candidate shall possess the eligibility certificate [Under Article 371(J)] issued by the Competent Authority on or before the last date for submitting online application as prescribed under the Karnataka Public Employment (Reservation in Appointment for Hyderabad-Karnataka Region) (Issue of Eligibility Certificates) Rules, 2013. |

| | | |
|---|---|---|
| Caste reservation | (1) | The candidate shall possess the certificate in prescribed format as on the date of submission of application and uploading the same is mandatory, failing which the application will not be considered. |
| | (2) | Prescribed format of Caste Certificate:<br>Candidates belonging to Scheduled Caste / Scheduled Tribe — Form – D<br>Candidates belonging to Category – I — Form – E<br>Candidates belonging to Category-II (A)/ II (B)/ III(A)/ III (B) — Form – F |
| | (3) | Candidates claiming reservation under Scheduled Caste shall possess latest Caste Certificate [i.e., Scheduled Caste (Category-A, Category – B and Category – C)] in the prescribed format. |
| Note:- The Caste and Income Certificate should have been obtained for Employment Purpose. The Caste Certificate issued for Education purpose or for obtaining benefits from schemes will not be considered. | | |

**IV. <u>Other Reservations</u>:**

| | | |
|---|---|---|
| Rural Reservation | (1) | Candidate who claim Rural Reservation should have studied from class I to X standard in rural area. |
| | (2) | Candidate belonging to General Merit and claiming the Rural Reservation shall submit a certificate in Form 2 duly countersigned by the Block Education Officer (BEO) and a certificate in Form No.1 stating that the candidate does not belong to Creamy Layer issued by the concerned Tahsildar. The said certificate should be obtained and be valid as on the last date fixed in the Notification. |
| | (3) | The candidates belonging to Scheduled Caste / Scheduled Tribe claiming the Rural Reservation should mandatorily submit a certificate in Form-2 duly countersigned by Block Education Officer (BEO) and the same shall be valid as on the last date of Notification. If any candidate fails to submit the same, such candidates will be ineligible to claim Rural Reservation. |

| | |
|---|---|
| In-service candidates | Candidates are required to submit No Objection Certificate (NOC) to this office immediately after the issuance of Selection list but the same should be submitted before the issuance of appointment order. |
| **Note**: The Caste and other reservation certificates which are obtained after the last date fixed for submission of online application will not be considered. | |

i) The originals of the uploaded documents in respect of Educational qualification, caste and other reservations as claimed by the candidates shall be produced at the time of Typing test / Interview / verification. If any candidate, fails to produce the same at the time of Typing test / Interview / verification, it will result in cancellation of reservation of such candidates and their applications will be considered only under General Merit category, if they are eligible.

ii) Reservation certificates submitted in formats other than prescribed will not be considered.

**V.** Candidates called for Typing Test / Interview shall produce a copy of Intimation along with Proof of Identity i.e., Voter ID or Aadhaar Card or PAN Card or Ration Card or Passport or Driving Licence in Original alongwith the documents of reservation as mentioned at Part B - II (e).

**VI.** Three Character Certificates i.e.,

a) one certificate issued from the Head of the Institution in which the candidate has completed Degree with study details

and

b) Two certificates from respectable persons in the society and not being relative but who is well acquainted with the candidate.

**VII.** If any discrepancies are found in the online application and original documents submitted during verification, the candidate will be liable for cancellation of his/her candidature.

**VIII.** The information furnished (i.e., Caste/Reservations or any data) by the candidate in the online application will be final and any request for modification of the same will not be entertained under any circumstances.

**IX.** Merely attending the Typing Test / Interview shall not confer any right to appointment and no candidate shall be appointed to the post unless the High Court of Karnataka is satisfied, after such enquiries as may be

considered necessary that the candidate is suitable in all respects for appointment to the post.

**X.** The candidate appointed to the post of Data Entry Assistant is liable to be posted at High Court of Karnataka, Principal Bench at Bengaluru or Benches at Dharwad and Kalaburagi.

**XI.** If any candidate attempts to obtain extraneous support by any means for candidature from any officials or non-officials, he/she will not be eligible for appointment.

**XII.** In the event of any inconsistency between Kannada and English version of this notification, the English version shall prevail.

**XIII.** On verification, at any time or at any stage of recruitment, if it is found that the information furnished by the candidate in the application is false or the candidate does not fulfill any of the eligibility criteria and/or that he/she has suppressed/twisted or truncated any material facts, his/her candidature will stand cancelled. If any of these shortcomings is found even after appointment, his/her appointment shall be liable to be terminated. Furnishing of wrong, incomplete or incorrect information would not only lead to disqualification but also liable for criminal prosecution for furnishing such information.

**BY ORDER OF HON'BLE THE CHIEF JUSTICE,**

**Sd/-**
**(M. CHANDRASHEKAR REDDY)**
**REGISTRAR GENERAL**

**ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು**

**ಅಧಿಸೂಚನೆ**

**ಸಂಖ್ಯೆ: HCRB/DEA – 7/2026 (KKR) ದಿನಾಂಕ:29ನೇ ಜೂನ್ 2026**

**ದತ್ತಾಂಶ ನಮೂದು ಸಹಾಯಕರ ಹುದ್ದೆಗಳಿಗಾಗಿ**

**ಅಭ್ಯರ್ಥಿಗಳ ನೇರ ನೇಮಕಾತಿ**

**ಕಲ್ಯಾಣ ಕರ್ನಾಟಕ ಪ್ರದೇಶ**

**ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:28ನೇ ಜುಲೈ 2026**

ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಇಲ್ಲಿ **7** ದತ್ತಾಂಶ ನಮೂದು ಸಹಾಯಕರ ಹುದ್ದೆಗೆ *[5 ಉಳಿಕೆ ಹುದ್ದೆಗಳು (ಬ್ಯಾಕ್‌ಲಾಗ್) ಸೇರಿದಂತೆ]* ಕಲ್ಯಾಣ ಕರ್ನಾಟಕ ಪ್ರದೇಶದ ಅಡಿಯಲ್ಲಿ ನೇರ ನೇಮಕಾತಿಗಾಗಿ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದವರೆಗೂ ಅಗತ್ಯ ಮತ್ತು ಇತರೆ ಅರ್ಹತಾ ಷರತ್ತುಗಳನ್ನು ಪೂರೈಸುವ ಅಭ್ಯರ್ಥಿಗಳು ಕರ್ನಾಟಕ ಉಚ್ಚ ನ್ಯಾಯಾಲಯದ ವೆಬ್‌ಸೈಟ್

https://judiciary.karnataka.gov.in ಮೂಲಕ ಆನ್‌ಲೈನ್ ಅರ್ಜಿಯನ್ನು ಸಲ್ಲಿಸಬಹುದೆಂದು ಅಧಿಸೂಚಿಸಲಾಗಿದೆ.

**ಭಾಗ–ಎ**

**1. ಖಾಲಿ ಹುದ್ದೆಗಳ ವರ್ಗೀಕರಣ :**

**ಕಲ್ಯಾಣ ಕರ್ನಾಟಕ ಪ್ರದೇಶದ 7 ಹುದ್ದೆಗಳು**
**[05 ಉಳಿಕೆ (ಬ್ಯಾಕ್‌ಲಾಗ್) ಹುದ್ದೆಗಳನ್ನೊಳಗೊಂಡಂತೆ]**

| ಪ್ರವರ್ಗ | ಸಾಮಾನ್ಯ ಅರ್ಹತೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಕನ್ನಡ ಮಾಧ್ಯಮ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಯೋಜನಾ ನಿರಾಶ್ರಿತ ಅಭ್ಯರ್ಥಿ | ಮಾಜಿ ಸೈನಿಕ | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ ಅಭ್ಯರ್ಥಿ | 1 | – | – | – | – | – | – | – | 1 |
| ಪರಿಶಿಷ್ಟ ಜಾತಿ | 1 | – | 1* | – | – | – | – | – | 1 + 1* |
| ಪರಿಶಿಷ್ಟ ಪಂಗಡ | 1* | 1* | – | – | – | – | – | – | 2* |
| ಪ್ರವರ್ಗ–I | – | 1* | – | – | – | – | – | – | 1* |
| ಪ್ರವರ್ಗ–II (ಎ) | – | 1* | – | – | – | – | – | – | 1* |
| ಪ್ರವರ್ಗ–II (ಬಿ) | – | – | – | – | – | – | – | – | – |
| ಪ್ರವರ್ಗ–III (ಎ) | – | – | – | – | – | – | – | – | – |
| ಪ್ರವರ್ಗ–III (ಬಿ) | – | – | – | – | – | – | – | – | – |
| ಒಟ್ಟು | 2 + 1* | 3* | 1* | – | – | – | – | – | 2 + 5* |

ಟಿಪ್ಪಣಿ:

1. (*) ಚಿಹ್ನೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಸೂಚಿಸುತ್ತದೆ.
2. ಮೇಲಿನ ವರ್ಗೀಕರಣವನ್ನು ಸರ್ಕಾರದ ಆದೇಶ ಸಂಖ್ಯೆ ಸಕಇ 515 ಪಕವಿ 2026 ದಿನಾಂಕ 08.05.2026, ಸಿಆಸುಇ 02 ಸೆಹಿಮ 2026 ದಿನಾಂಕ 13.05.2026 ಮತ್ತು 25.05.2026 ರ ಪ್ರಕಾರ ಮಾಡಲಾಗಿದೆ.

**2. ವೇತನ ಶ್ರೇಣಿ :**

₹25500 – 81100 (Level – 4) ಇತರೆ ಭತ್ಯೆಗಳೊಂದಿಗೆ

**3. ನೇಮಕಾತಿಯ ವಿಧಾನ :**

ಅಭ್ಯರ್ಥಿಗಳ ಆಯ್ಕೆಯನ್ನು ಈ ಕೆಳಗಿನ ನಿಯಮಗಳ ಅನುಸಾರ ಮಾಡಲಾಗುತ್ತದೆ–

ಎ) ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಕರ್ನಾಟಕ ಉಚ್ಚ ನ್ಯಾಯಾಲಯದ (ಸೇವಾ ಮತ್ತು ನೇಮಕಾತಿ ಷರತ್ತುಗಳು) ನಿಯಮಗಳು, 1973,

ಬಿ) ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಕರ್ನಾಟಕ ಉಚ್ಚ ನ್ಯಾಯಾಲಯ ಸೇವಾ (ಆಯ್ಕೆಯ ಮೂಲಕ ನೇರ ನೇಮಕಾತಿ) ನಿಯಮಗಳು, 1984,

ಸಿ) ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977,

ಡಿ) ಕರ್ನಾಟಕ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳು (ನೇಮಕಾತಿ ಮೀಸಲಾತಿ ಇತ್ಯಾದಿ) ಕಾಯಿದೆ, 1990,

ಇ) ಕರ್ನಾಟಕ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳು (ನೇಮಕಾತಿ ಮೀಸಲಾತಿ ಇತ್ಯಾದಿ) ನಿಯಮಗಳು, 1992.

ಎಫ್) ಈ ಕೆಳಗಿನ ಸರ್ಕಾರದ ಸುತ್ತೋಲೆಗಳು / ಅಧಿಸೂಚನೆಗಳ ಪ್ರಕಾರ:–

| ಕ್ರಮ ಸಂಖ್ಯೆ | ಸರ್ಕಾರದ ಅಧಿಸೂಚನೆ / ಸುತ್ತೋಲೆ | ದಿನಾಂಕ | ವಿಷಯ |
|---|---|---|---|
| 1. | ಸಿಆಸುಇ 262 ಸೆನೆನಿ 2025 | 29.01.2026 | ವಯೋಮಿತಿಯಲ್ಲಿ 5 ವರ್ಷಗಳ ಸಡಲಿಕೆಯನ್ನು ನೀಡುವ ಬಗ್ಗೆ (ಒಂದು ಬಾರಿಯ ಕ್ರಮವಾಗಿ) |
| 2. | ಸಿಆಸುಇ 08 ಸೆನೆನಿ 2001 | 13.02.2001 | ಅಭ್ಯರ್ಥಿಯು ಗ್ರಾಮೀಣ ಮೀಸಲಾತಿ ಸೌಲಭ್ಯ ಕೋರುವ ಬಗ್ಗೆ. |
| 3. | ಸಿಆಸುಇ 19 ಸೆನೆನಿ 2020 | 12.10.2020 | ಸೇವಾನಿರತ ಅಭ್ಯರ್ಥಿಯ ನಿರಕ್ಷೇಪಣಾ ಪ್ರಮಾಣಪತ್ರದ ಬಗ್ಗೆ. |

**4. ಅರ್ಹತಾ ಮಾನದಂಡಗಳು :**

(a) **ವಿದ್ಯಾರ್ಹತೆ :**

1) ಅಭ್ಯರ್ಥಿಗಳು ಯಾವುದೇ ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯದಿಂದ ವಿಜ್ಞಾನ / ಕಲೆ / ವಾಣಿಜ್ಯ / ವ್ಯವಹಾರ ನಿರ್ವಹಣೆ (Business Management)/ ಕಂಪ್ಯೂಟರ್ ಅಪ್ಲಿಕೇಷನ್ಸ್ ವಿಷಯಗಳ ಪದವಿಯಲ್ಲಿ, ಸಾಮಾನ್ಯ ವರ್ಗ ಮತ್ತು ಇತರೆ ಹಿಂದುಳಿದ ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ಕನಿಷ್ಠ ಶೇಕಡ 55 ರಷ್ಟು ಅಂಕಗಳನ್ನು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ಕನಿಷ್ಠ ಶೇಕಡ 50 ರಷ್ಟು ಅಂಕಗಳೊಂದಿಗಿನ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು.

**ಮತ್ತು**

2) ಆಂಗ್ಲ ಮತ್ತು ಕನ್ನಡ ಬೆರಳಚ್ಚು ಪ್ರೌಢ ದರ್ಜೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಜೊತೆಗೆ ಕಂಪ್ಯೂಟರ್ ನಿರ್ವಹಣಾ ಜ್ಞಾನ ಹೊಂದಿರಬೇಕು.

ಟಿಪ್ಪಣಿ: ಕಂಪ್ಯೂಟರ್ ನಿರ್ವಹಣಾ ಜ್ಞಾನ ಎಂದರೆ ಕಂಪ್ಯೂಟರ್ ಬೇಸಿಕ್ಸ್ ಕೋರ್ಸಿನ ಪ್ರಮಾಣಪತ್ರವನ್ನು ಪ್ರಧಾನ ಮಾಡುವ ಕಂಪ್ಯೂಟರ್ ಶಿಕ್ಷಣ ನೀಡುವ ಸಂಸ್ಥೆಯಿಂದ ಹೊಂದಿರತಕ್ಕದ್ದು.

(b) **ವಯೋಮಿತಿ :**

ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕದಂದು ಎಲ್ಲಾ ಪ್ರವರ್ಗದವರು ಕನಿಷ್ಠ 18 ವರ್ಷದವರಾಗಿರಬೇಕು ಮತ್ತು ಗರಿಷ್ಠ ವಯೋಮಿತಿ ಈ ಕೆಳಕಂಡಂತೆ ಇರತಕ್ಕದ್ದು:

| ಅಭ್ಯರ್ಥಿಯು ಸೇರಿದ ವರ್ಗ | ಗರಿಷ್ಠ ವಯೋಮಿತಿ |
|---|---|
| ಸಾಮಾನ್ಯ ಅಭ್ಯರ್ಥಿಗಳು | 40 ವರ್ಷಗಳು |

| | |
|---|---|
| ಇತರೆ ಹಿಂದುಳಿದ ವರ್ಗಗಳ ಪ್ರವರ್ಗ – II(ಎ) / II(ಬಿ) / III(ಎ) / III(ಬಿ) | 43 ವರ್ಷಗಳು |
| ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಪ್ರವರ್ಗ – I | 45 ವರ್ಷಗಳು |

**5. ಅರ್ಜಿ ಶುಲ್ಕ :**

ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ಉಲ್ಲೇಖಿಸಿರುವಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಆನ್‌ಲೈನ್ ಪಾವತಿ ಗೇಟ್‌ವೇ ಮೂಲಕ ಅರ್ಜಿ ಶುಲ್ಕವನ್ನು ಪಾವತಿಸಬೇಕು. ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಶುಲ್ಕ ಈ ಕೆಳಗಿನಂತಿರುತ್ತದೆ:

| ಅಭ್ಯರ್ಥಿಯು ಸೇರಿದ ವರ್ಗ | ಅರ್ಜಿ ಶುಲ್ಕ |
|---|---|
| ಸಾಮಾನ್ಯ ಅಭ್ಯರ್ಥಿಗಳು | ₹350/– |
| ಇತರೆ ಹಿಂದುಳಿದ ವರ್ಗಗಳ ಪ್ರವರ್ಗ– II(ಎ) / II(ಬಿ) / III(ಎ) / III(ಬಿ) | ₹350/– |
| ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಪ್ರವರ್ಗ–I ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ (Persons with Benchmark Disability) | ₹200/– |

**ಸೂಚನೆ:**

1. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಅರ್ಜಿಗಳಿಗೆ ಶುಲ್ಕವನ್ನು ಪಾವತಿಸಿದ್ದರೂ ಸಹ, ಒಮ್ಮೆ ಪಾವತಿಸಿದ ಶುಲ್ಕವನ್ನು ಯಾವುದೇ ಸಂದರ್ಭದಲ್ಲೂ ಮರುಪಾವತಿಸಲಾಗುವುದಿಲ್ಲ ಎಂಬ ಅಂಶವನ್ನು ಅಭ್ಯರ್ಥಿಗಳು ಗಮನದಲ್ಲಿಟ್ಟುಕೊಳ್ಳಬೇಕು.
2. ಕೊನೆಯ ಕ್ಷಣದಲ್ಲಿ ಅರ್ಜಿ ಸಲ್ಲಿಸುವಾಗ ಆಗಬಹುದಾದ ಒತ್ತಡಗಳನ್ನು ತಪ್ಪಿಸಲು ಅಭ್ಯರ್ಥಿಗಳು ಮುಂಚಿತವಾಗಿಯೇ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವುದು.
3. ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಲು ಹಾಗೂ ಅರ್ಜಿ ಶುಲ್ಕವನ್ನು ಪಾವತಿಸಲು ದಿನಾಂಕ 28.07.2026, ರಾತ್ರಿ 11.59 ರವರೆಗೆ ನಿಗದಿಪಡಿಸಲಾಗಿರುತ್ತದೆ.
4. ಅವಶ್ಯಕತೆಗಳನ್ನು ಪೂರೈಸದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
5. ಬೆರಳಚ್ಚು ಪರೀಕ್ಷೆಗೆ ಮತ್ತು ಸಂದರ್ಶನಕ್ಕೆ ಕರೆಯಲ್ಪಡುವ ಅಭ್ಯರ್ಥಿಗಳಿಗೆ ಸಂದರ್ಭಾನುಸಾರ ತಿಳಿಸಲಾಗುವುದು.

**6. ಸೇವಾ ಪರಿವೀಕ್ಷಣಾ ಅವಧಿ :**

ಅಭ್ಯರ್ಥಿಯು ನೇಮಕಗೊಂಡ ಪಕ್ಷದಲ್ಲಿ ಪ್ರಾರಂಭಿಕವಾಗಿ ಎರಡು ವರ್ಷಗಳ ಅವಧಿಗೆ ಅಥವಾ ಅಗತ್ಯವಿದ್ದರೆ ವಿಸ್ತರಿಸಬಹುದಾದ ಅವಧಿಗೆ ಪರಿವೀಕ್ಷಣಾರ್ಥಿಗಳಾಗಿರುತ್ತಾರೆ.

**7. ಆಯ್ಕೆ ವಿಧಾನ :**

**(i) ಬೆರಳಚ್ಚು ಪರೀಕ್ಷೆಗೆ ಅಭ್ಯರ್ಥಿಗಳ ಪಟ್ಟಿ:**

ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳ ಅರ್ಹತೆಯ ಆಧಾರದ ಮೇಲೆ ದತ್ತಾಂಶ ನಮೂದು ಸಹಾಯಕರ ಹುದ್ದೆಗೆ ನೇಮಕಾತಿಗಾಗಿ ಬೆರಳಚ್ಚು ಪರೀಕ್ಷೆಗೆ ಅಭ್ಯರ್ಥಿಗಳನ್ನು ಪಟ್ಟಿ ಮಾಡುವುದು ಮತ್ತು ಅರ್ಹತಾ ಪರೀಕ್ಷೆಯಲ್ಲಿ ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳು ಒಟ್ಟು ಅಂಕಗಳ ಶೇಕಡಾವಾರು ಸಮಾನತೆಯನ್ನು ಪಡೆದಿದ್ದರೆ, ಅಂತಹ ಅಭ್ಯರ್ಥಿಗಳ ವಿಷಯದಲ್ಲಿ ಅರ್ಹತೆಯನ್ನು ವಯಸ್ಸಿನ ಆಧಾರದ ಮೇಲೆ ನಿಗದಿಪಡಿಸಲಾಗುತ್ತದೆ. ಅಭ್ಯರ್ಥಿಗಳ ಹೆಸರುಗಳನ್ನು ಒಳಗೊಂಡಿರುವ ಪಟ್ಟಿಯಲ್ಲಿ ಅಧಿಸೂಚಿಸಿರುವ ಖಾಲಿ ಹುದ್ದೆಗಳ ಸಂಖ್ಯೆಗೆ ಹತ್ತು ಪಟ್ಟು ಅಭ್ಯರ್ಥಿಗಳನ್ನು ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡಿ, ಬೆರಳಚ್ಚು ಪರೀಕ್ಷೆಗೆ ಕರೆಯಲಾಗುವುದು.

**(ii)** ದತ್ತಾಂಶ ನಮೂದು ಸಹಾಯಕರ ಹುದ್ದೆಗೆ ಬೆರಳಚ್ಚು ಪರೀಕ್ಷೆ ಮತ್ತು ಸಂದರ್ಶನ ಸಾಮರ್ಥ್ಯದ ಆಧಾರದ ಮೇಲೆ ಆಯ್ಕೆಯನ್ನು ಈ ಕೆಳಕಂಡಂತೆ ಮಾಡಲಾಗುತ್ತದೆ.

| **ಕ್ರಮ ಸಂಖ್ಯೆ** | **ವಿವರಗಳು** | **ಗರಿಷ್ಠ ಅಂಕಗಳು** | **ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಪಡೆಯಬೇಕಾದ ಕನಿಷ್ಠ ಅಂಕಗಳು** |
|---|---|---|---|
| 1 | ಬೆರಳಚ್ಚು ಪರೀಕ್ಷೆ | 100 | 60 |
| 2 | ಸಂದರ್ಶನ | 20 | 10 |
| | **ಒಟ್ಟು** | **120 ಅಂಕಗಳು** | **70 ಅಂಕಗಳು** |

**(iii) ಬೆರಳಚ್ಚು ಪರೀಕ್ಷೆಯನ್ನು ನಡೆಸುವ ವಿಧಾನ:**

500 ಪದಗಳನ್ನು ಹೊಂದಿರುವ ಕಂಡಿಕೆಯನ್ನು 10 ನಿಮಿಷಗಳ ಕಾಲ ಉಕ್ತಲೇಖನ (dictation) ನೀಡಲಾಗುತ್ತದೆ ಮತ್ತು ಅಭ್ಯರ್ಥಿಗಳು ಉಕ್ತಲೇಖನ (dictation) ನೀಡಿದ ಕಂಡಿಕೆಯನ್ನು ಕಂಪ್ಯೂಟರ್‌ನಲ್ಲಿ 20 ನಿಮಿಷಗಳಲ್ಲಿ ಲಿಪ್ಯಂತರ ಮಾಡಬೇಕು.

**(iv) ಸಂದರ್ಶನ :**

ಬೆರಳಚ್ಚು ಪರೀಕ್ಷೆಯಲ್ಲಿ ಯಶಸ್ವಿಯಾದ ಅಭ್ಯರ್ಥಿಗಳನ್ನು, ಅರ್ಹತೆಯ ಕ್ರಮದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು ಮತ್ತು ಸಾಧ್ಯವಾದಷ್ಟು ಮಟ್ಟಿಗೆ, ಪ್ರತಿಯೊಂದು ವಿಭಾಗದಲ್ಲಿ ಖಾಲಿ ಹುದ್ದೆಗಳ ಸಂಖ್ಯೆಯ ಐದು ಪಟ್ಟು ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಸೂಚಿಸಲಾಗುತ್ತದೆ.

## ಭಾಗ – ಬಿ

## ಸಾಮಾನ್ಯ ಸೂಚನೆಗಳು

ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಮೊದಲು ಎಲ್ಲಾ ಸೂಚನೆಗಳನ್ನು ಎಚ್ಚರಿಕೆಯಿಂದ ಓದತಕ್ಕದ್ದು.

ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವಾಗ, ಅಭ್ಯರ್ಥಿಯು ಅರ್ಹತಾ ಮಾನದಂಡ ಮತ್ತು ಇತರೆ ಮಾನದಂಡಗಳನ್ನು ಪೂರೈಸಿದ್ದಾರೆಂದು ಖಚಿತಪಡಿಸಿಕೊಳ್ಳಬೇಕು. ಆನ್‌ಲೈನ್‌ನಲ್ಲಿ ಮಾಹಿತಿಯನ್ನು ಒದಗಿಸುವಾಗ

ಅಭ್ಯರ್ಥಿಯು ಸಂಬಂಧಪಟ್ಟ ಅಂಕಪಟ್ಟಿಗಳು ಮತ್ತು ಶೈಕ್ಷಣಿಕ ಅರ್ಹತೆ / ಮೀಸಲಾತಿಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಹೊಂದಿರಬೇಕು.

**I.** ಅಭ್ಯರ್ಥಿಯು ಈ ಅಧಿಸೂಚನೆಯ ಅವಶ್ಯಕತೆಯಂತೆ ನಿರ್ದಿಷ್ಟ ವಿದ್ಯಾರ್ಹತೆಯನ್ನು ಸಮಾನವೆಂದು ಪರಿಗಣಿಸಬೇಕೆಂದರೆ, ಅಭ್ಯರ್ಥಿಯು ಈ ಸಂಬಂಧದ ಆದೇಶ / ಪತ್ರದ ಪ್ರತಿಯನ್ನು ಲಗತ್ತಿಸಿ ಜೊತೆಗೆ ಅದನ್ನು ಯಾವ ಪ್ರಾಧಿಕಾರದ ಅಡಿಯಲ್ಲಿ ಪರಿಗಣಿಸಲಾಗಿದೆ ಎಂಬುದನ್ನು ಸೂಚಿಸುವ ಸಂಬಂಧಿತ ಅರ್ಹತಾ ಪತ್ರದೊಂದಿಗೆ (ಸಂಖ್ಯೆ ಮತ್ತು ದಿನಾಂಕದೊಂದಿಗೆ) ಅಪ್‌ಲೋಡ್ ಮಾಡತಕ್ಕದ್ದು. ಅದು ಸ್ಥಳೀಯ ಭಾಷೆಯಲ್ಲಿದ್ದರೆ, ಪ್ರಮಾಣೀಕರಿಸಲಾದ ಇಂಗ್ಲೀಷ್ ಅಥವಾ ಕನ್ನಡ ಅನುವಾದಿತ ಪ್ರತಿಯನ್ನು ಸಹ ಅಪ್‌ಲೋಡ್ ಮಾಡತಕ್ಕದ್ದು.

**II.** ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವ ವಿಧಾನ :

a. ಅಭ್ಯರ್ಥಿಯು ಆನ್‌ಲೈನ್ ಮೂಲಕ ಅರ್ಜಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ https://judiciary.karnataka.gov.in ವೆಬ್‌ಸೈಟ್‌ನಲ್ಲಿ ಸಲ್ಲಿಸತಕ್ಕದ್ದು.

**ಸೂಚನೆ: ಆನ್‌ಲೈನ್ ಹೊರತುಪಡಿಸಿ ಬೇರೆ ಯಾವುದೇ ವಿಧಾನದಿಂದ ಕಳುಹಿಸಲಾದ / ಸಲ್ಲಿಸಲಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.**

b. ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಅಗತ್ಯವಿರುವ ಮಾಹಿತಿಯನ್ನು ಭರ್ತಿ ಮಾಡಿ, ಉಲ್ಲೇಖಿಸಲಾದ ಸೂಚನೆಗೆ ಅನುಗುಣವಾಗಿ ಶುಲ್ಕವನ್ನು ಪಾವತಿಸತಕ್ಕದ್ದು. ಆನ್‌ಲೈನ್ ಅರ್ಜಿಯನ್ನು ಅಂತಿಮವಾಗಿ ಸಲ್ಲಿಸುವ ಮೊದಲು ಅಭ್ಯರ್ಥಿಯು ಭರ್ತಿ ಮಾಡಿದ ವಿವರಗಳು ಎಲ್ಲಾ ರೀತಿಯಲ್ಲೂ ಸರಿಯಾಗಿವೆಯೇ ಎಂದು ಖಚಿತಪಡಿಸಿಕೊಳ್ಳತಕ್ಕದ್ದು. ಒಮ್ಮೆ ಸಲ್ಲಿಸಿದ ಅರ್ಜಿಯನ್ನು ಹಿಂಪಡೆಯಲು ಅಥವಾ ಮಾರ್ಪಡಿಸಲು ಅವಕಾಶವಿರುವುದಿಲ್ಲ.

c. ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಸಂಬಂಧಿತ ಕಾಲಂಗಳಲ್ಲಿ ಸಂವಹನಕ್ಕಾಗಿ ಕಡ್ಡಾಯವಾಗಿ ಅವನ / ಅವಳ ಚಾಲ್ತಿಯಲ್ಲಿರುವ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ಐಡಿ ಯನ್ನು ಒದಗಿಸಬೇಕು. ತಪ್ಪಾದ ಮಾಹಿತಿಯನ್ನು ಒದಗಿಸಿದಲ್ಲಿ, ಎಸ್‌ಎಂಎಸ್ ಅಥವಾ ಇ–ಮೇಲ್ ಮುಖಾಂತರ ಸೂಚನೆ / ಸಂದೇಶಗಳು ಅಭ್ಯರ್ಥಿಗಳಿಗೆ ತಲುಪದಿರುವುದಕ್ಕೆ ಈ ಪ್ರಾಧಿಕಾರವು ಜವಾಬ್ದಾರರಾಗಿರುವುದಿಲ್ಲ.

d. ಅಭ್ಯರ್ಥಿಯು ತನ್ನ ಇತ್ತೀಚಿನ ಪಾಸ್‌ಪೋರ್ಟ್ ಗಾತ್ರದ ಶ್ವೇತ ವರ್ಣದ ಹಿನ್ನಲೆಯುಳ್ಳ ಛಾಯಾಚಿತ್ರವನ್ನು ಸ್ಕ್ಯಾನ್ ಮಾಡಬೇಕು (5 ಸೆ.ಮೀ. ಉದ್ದ X 3.5 ಸೆ.ಮೀ. ಅಗಲ ಮತ್ತು ಗರಿಷ್ಠ 50 ಕೆಬಿ ಗಾತ್ರ) ಮತ್ತು ಕಪ್ಪು ಬಾಲ್ ಪಾಯಿಂಟ್ ಪೆನ್‌ನಲ್ಲಿ ಬಿಳಿ ಕಾಗದದ ಮೇಲೆ ಸಹಿಯನ್ನು (2.5 ಸೆ.ಮೀ. ಉದ್ದ X 7.5 ಸೆ.ಮೀ. ಅಗಲ ಮತ್ತು ಗರಿಷ್ಠ 25 ಕೆಬಿ ಗಾತ್ರ) jpg ಸ್ವರೂಪದಲ್ಲಿ ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಅಪ್‌ಲೋಡ್ ಮಾಡತಕ್ಕದ್ದು. jpg ಚಿತ್ರಗಳು ಸ್ಪಷ್ಟವಾಗಿ ಕಾಣುವಂತಿರಬೇಕು. ಹಾಗೆ ಇಲ್ಲದಿದ್ದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

e. ಅಭ್ಯರ್ಥಿಯು ಈ ಕೆಳಗಿನ ದಾಖಲೆಗಳನ್ನು ಸಂದರ್ಭಾನುಸಾರ ಅಪ್‌ಲೋಡ್ ಮಾಡಬೇಕು.

(i) ಎಸ್.ಎಸ್.ಎಲ್.ಸಿ. ಅಂಕಪಟ್ಟಿ (ಜನ್ಮ ದಿನಾಂಕದ ಆಧಾರಕ್ಕಾಗಿ).

(ii) ವಿಜ್ಞಾನ / ಕಲೆ / ವಾಣಿಜ್ಯ / ವ್ಯವಹಾರ ನಿರ್ವಹಣೆ (Business Management) / ಕಂಪ್ಯೂಟರ್ ಅಪ್ಲಿಕೇಷನ್ಸ್ ವಿಷಯಗಳಲ್ಲಿ ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯದಿಂದ ಪಡೆದ ಪದವಿ ಅಂಕಪಟ್ಟಿಗಳು ಸೆಮಿಸ್ಟರ್ಸ್ ಆದಲ್ಲಿ I ರಿಂದ VI ಸೆಮಿಸ್ಟರ್ಸ್ ಅಥವಾ I ರಿಂದ III ವರ್ಷಗಳ ಅಂಕಪಟ್ಟಿ ಜೊತೆಗೆ ಘಟಿಕೋತ್ಸವದ / ತಾತ್ಕಾಲಿಕ ಪದವಿ ಪ್ರಮಾಣ ಪತ್ರ.

(iii) ಲ್ಯಾಟರಲ್ ಪ್ರವೇಶದಲ್ಲಿ ಪದವಿಯನ್ನು ಪಡೆದಿದ್ದರೆ, ಘಟಿಕೋತ್ಸವದ / ತಾತ್ಕಾಲಿಕ ಪ್ರಮಾಣ ಪತ್ರದೊಂದಿಗೆ ಡಿಪ್ಲೋಮದಲ್ಲಿ ಕಮರ್ಷಿಯಲ್ ಪ್ರಾಕ್ಟೀಸ್ / ಸೆಕ್ರೆಟೇರಿಯಲ್ ಪ್ರಾಕ್ಟೀಸ್ ಅಂಕಪಟ್ಟಿ – ಸೆಮಿಸ್ಟರ್ಸ್ ಆದಲ್ಲಿ I ರಿಂದ VI ಸೆಮಿಸ್ಟರ್ಸ್ ಅಥವಾ I ರಿಂದ III ವರ್ಷಗಳ ಅಂಕಪಟ್ಟಿ.

(iv) ಆಂಗ್ಲ ಮತ್ತು ಕನ್ನಡ ಬೆರಳಚ್ಚು ಪ್ರೌಢ ದರ್ಜೆ ಪರೀಕ್ಷೆಯ ಪ್ರಮಾಣ ಪತ್ರ.

(v) ಜಾತಿ ಮತ್ತು ಆದಾಯ ಪ್ರಮಾಣಪತ್ರ, ಅನ್ವಯಿಸಿದರೆ ಮಾತ್ರ.

(vi) ಇತರೆ ಮೀಸಲಾತಿಗಳಿಗೆ ಸಂಬಂಧಪಟ್ಟ ಪ್ರಮಾಣಪತ್ರಗಳು i.e. ಗ್ರಾಮೀಣ ಪ್ರದೇಶದಲ್ಲಿ 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿದ ಪ್ರಮಾಣಪತ್ರ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶದ (371–ಜೆ) ಪ್ರಮಾಣಪತ್ರ.

ಸ್ಕ್ಯಾನ್ ಮಾಡಿದ ದಾಖಲೆಗಳನ್ನು ಪಿಡಿಎಫ್ ನಮೂನೆಯಲ್ಲಿ ಮಾತ್ರ ಅಪ್‌ಲೋಡ್ ಮಾಡತಕ್ಕದ್ದು ಮತ್ತು ಓದಲು ಸ್ಪಷ್ಟವಾಗಿರಬೇಕು.

**ಸೂಚನೆ:** ಅಭ್ಯರ್ಥಿಯು ಆನ್‌ಲೈನ್ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಮೇಲೆ ಹೇಳಲಾದ ಯಾವುದೇ ಪ್ರಮಾಣಪತ್ರಗಳನ್ನು ಅಪ್‌ಲೋಡ್ ಮಾಡಲು ವಿಫಲರಾದಲ್ಲಿ, ನಂತರ ಸ್ವೀಕರಿಸಲಾಗುವುದಿಲ್ಲ.

f. ಆನ್‌ಲೈನ್ ಅರ್ಜಿಯನ್ನು ಅಂತಿಮವಾಗಿ ಸಲ್ಲಿಸುವ ಮೊದಲು, ಅಭ್ಯರ್ಥಿಯು ಸರಿಯಾಗಿ ಭರ್ತಿ ಮಾಡಿದ ಅರ್ಜಿಯನ್ನು ಪೂರ್ವವೀಕ್ಷಿಸಲು (Preview) ಸಾಧ್ಯವಾಗುತ್ತದೆ. ಅಭ್ಯರ್ಥಿಯು ಭರ್ತಿ ಮಾಡಿದ ಅರ್ಜಿಯನ್ನು ದಾಖಲೆಗಾಗಿ ಮುದ್ರಿಸಿಟ್ಟುಕೊಳ್ಳತಕ್ಕದ್ದು.

g. ಅಭ್ಯರ್ಥಿಯು ಕರ್ನಾಟಕ ಉಚ್ಚ ನ್ಯಾಯಾಲಯದ ವೆಬ್‌ಸೈಟ್‌ನಲ್ಲಿ ಒದಗಿಸಲಾಗುವ ಲಿಂಕ್‌ನಿಂದ ಸೂಚನಾ / ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಲು ಮತ್ತು ಬೆರಳಚ್ಚು ಪರೀಕ್ಷೆಗೆ / ಸಂದರ್ಶನಕ್ಕೆ ಅರ್ಹತೆಯ ಕುರಿತು ಮಾಹಿತಿಗಾಗಿ ತಮ್ಮ ಅರ್ಜಿ ಸಂಖ್ಯೆಯನ್ನು ಜಾಗರೂಕತೆಯಿಂದ ಇಟ್ಟುಕೊಳ್ಳತಕ್ಕದ್ದು.

h. (i) ಅಭ್ಯರ್ಥಿಗಳು ಕರ್ನಾಟಕ ಉಚ್ಚ ನ್ಯಾಯಾಲಯದ ಜಾಲತಾಣದ ನೇಮಕಾತಿ ಅಧಿಸೂಚನೆ ವಿಭಾಗಕ್ಕೆ ನಿಯಮಿತವಾಗಿ ಭೇಟಿ ನೀಡಿ ದತ್ತಾಂಶ ನಮೂದು ಸಹಾಯಕರ ಹುದ್ದೆಗಳ ಕುರಿತಾದ ಮಾಹಿತಿಯನ್ನು ಪಡೆಯತಕ್ಕದ್ದು.

(ii) ಬೆರಳಚ್ಚು ಪರೀಕ್ಷೆಗೆ / ಸಂದರ್ಶನಕ್ಕೆ ಆಯ್ಕೆ ಮಾಡಲಾಗುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗುತ್ತದೆ – https://judiciary.karnataka.gov.in. ಇದಲ್ಲದೆ, ಬೆರಳಚ್ಚು ಪರೀಕ್ಷೆ / ಸಂದರ್ಶನಕ್ಕಾಗಿ ಸೂಚನಾ ಪತ್ರವನ್ನು ಡೌನ್‌ಲೋಡ್ ಮಾಡಲು ಲಿಂಕ್ ಅನ್ನು ಒದಗಿಸಲಾಗುತ್ತದೆ.

i. ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಅಭ್ಯರ್ಥಿಯು ಕಡೆಯದಾಗಿ ಸಲ್ಲಿಸಿದ ಅರ್ಜಿಯನ್ನು ಮಾತ್ರ ಪರಿಗಣಿಸಲಾಗುತ್ತದೆಂಬುದನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು. **ಕೊನೆಯ ಅರ್ಜಿಯನ್ನು ಬಿಟ್ಟು ಬೇರೆ ಯಾವುದೇ ಅರ್ಜಿ ಪರಿಗಣಿಸಲು, ಸಲ್ಲಿಸುವ ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ.**

j. ಬೆರಳಚ್ಚು ಪರೀಕ್ಷೆಗೆ / ಸಂದರ್ಶನಕ್ಕೆ ಕರೆಯಲಾಗುವ ಅಭ್ಯರ್ಥಿಗಳು, ಕರ್ನಾಟಕ ಉಚ್ಚ ನ್ಯಾಯಾಲಯವು ನಿಗದಿಪಡಿಸುವ ಸ್ಥಳ ಹಾಗೂ ಸಮಯಕ್ಕೆ ತಮ್ಮ ಸ್ವಂತ ಖರ್ಚಿನಲ್ಲೇ ಹಾಜರಾಗತಕ್ಕದ್ದು.

**III. ಮೀಸಲಾತಿ ಕೋರುವ ಅಭ್ಯರ್ಥಿಗಳು:**

<table>
<tr><td>ಕಲ್ಯಾಣ ಕರ್ನಾಟಕ ಪ್ರದೇಶ (ಸ್ಥಳಿಯ ವೃಂದ)</td><td colspan="3">ಸಂವಿಧಾನದ ಅನುಚ್ಛೇದ 371–ಜೆ ಅಡಿಯಲ್ಲಿನ ಕಲ್ಯಾಣ ಕರ್ನಾಟಕ ಪ್ರದೇಶದಡಿಯಲ್ಲಿ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು, ಕರ್ನಾಟಕ ಸರ್ಕಾರಿ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶ ಅರ್ಹತಾ ಪ್ರಮಾಣ ಪತ್ರಗಳು) ನಿಯಮಗಳು, 2013ರ ಅಡಿಯಲ್ಲಿ ಗೊತ್ತುಪಡಿಸಿದಂತೆ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕ ಅಥವಾ ಅದಕ್ಕೂ ಮುಂಚಿತವಾಗಿಯೇ ಸಕ್ಷಮ ಪ್ರಾಧಿಕಾರವು ನೀಡುವ ಅರ್ಹತಾ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.</td></tr>
<tr><td rowspan="5">ಜಾತಿ ಮೀಸಲಾತಿ ಕೋರುವ ಬಗ್ಗೆ</td><td>(1)</td><td colspan="2">ಅಭ್ಯರ್ಥಿಯು ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕದಂದು ನಿಗದಿತ ನಮೂನೆಯಲ್ಲಿ ಪ್ರಮಾಣಪತ್ರವನ್ನು ಹೊಂದಿರಬೇಕು ಮತ್ತು ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕು. ವಿಫಲವಾದರೆ, ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.</td></tr>
<tr><td rowspan="4">(2)</td><td colspan="2">ಜಾತಿ ಪ್ರಮಾಣಪತ್ರದ ನಿಗದಿತ ನಮೂನೆ:</td></tr>
<tr><td>ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು</td><td>ನಮೂನೆ – ಡಿ</td></tr>
<tr><td>ಪ್ರವರ್ಗ–I ಕ್ಕೆ ಸೇರಿದ ಅಭ್ಯರ್ಥಿಗಳು</td><td>ನಮೂನೆ – ಇ</td></tr>
<tr><td>ಪ್ರವರ್ಗ– II(A)/ II(B)/ III(A)/ III(B) ಗೆ ಸೇರಿದ ಅಭ್ಯರ್ಥಿಗಳು</td><td>ನಮೂನೆ – ಎಫ್</td></tr>
<tr><td></td><td>(3)</td><td colspan="2">ಪರಿಶಿಷ್ಟ ಜಾತಿಯ ಅಡಿಯಲ್ಲಿ ಮೀಸಲಾತಿ ಕೋರುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಇತ್ತೀಚಿನ ಜಾತಿ ಪ್ರಮಾಣಪತ್ರವನ್ನು [ಅಂದರೆ ಪರಿಶಿಷ್ಟ ಜಾತಿ (ಪ್ರವರ್ಗ – ಎ), (ಪ್ರವರ್ಗ – ಬಿ) ಮತ್ತು (ಪ್ರವರ್ಗ – ಸಿ] ಹೊಂದಿರಬೇಕು.</td></tr>
<tr><td colspan="4">ಸೂಚನೆ: ಉದ್ಯೋಗಕ್ಕಾಗಿ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಮಾತ್ರ ಪರಿಗಣಿಸಲಾಗುವುದು. ಶಿಕ್ಷಣ ಅಥವಾ ಇತರೆ ಸೌಲಭ್ಯಗಳಿಗೆ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.</td></tr>
</table>

**IV. ಇತರೆ ಮೀಸಲಾತಿಗಳು:**

| | | |
|---|---|---|
| ಗ್ರಾಮೀಣ ಮೀಸಲಾತಿ | (1) | ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಗ್ರಾಮೀಣ ಪ್ರದೇಶದಲ್ಲಿ 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿರಬೇಕು. |
| | (2) | ಸಾಮಾನ್ಯ ಅರ್ಹತೆಗೆ ಸೇರಿದ ಮತ್ತು ಗ್ರಾಮೀಣ ಮೀಸಲಾತಿಯನ್ನು ಪಡೆಯಲು ಬಯಸುವ ಅಭ್ಯರ್ಥಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಯಿಂದ ಮೇಲುರುಜು ಮಾಡಲಾದ ನಮೂನೆ 2 ರಲ್ಲಿ ಪ್ರಮಾಣಪತ್ರವನ್ನು ಮತ್ತು ಸಂಬಂಧಪಟ್ಟ ತಹಶೀಲ್ದಾರ್ ನೀಡಿದ ಕೆನೆಪದರಕ್ಕೆ ಸೇರಿದವರಲ್ಲ ಎಂದು ಹೇಳುವ ನಮೂನೆ 1 ರಲ್ಲಿ ಪ್ರಮಾಣಪತ್ರವನ್ನು ಸಲ್ಲಿಸಬೇಕು. ಈ ಪ್ರಮಾಣಪತ್ರಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಮಾನ್ಯವಾಗಿರತಕ್ಕದ್ದು. |
| | (3) | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ–I / ಪ್ರವರ್ಗ– II(A) / II(B)/ III(A)/ III(B) ಗಳಿಗೆ ಸೇರಿದ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿಯನ್ನು ಪಡೆಯಲು ಕಡ್ಡಾಯವಾಗಿ ನಮೂನೆ–2 ರಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಯಿಂದ ಸಹಿ ಮಾಡಲಾದ ಪ್ರಮಾಣಪತ್ರವನ್ನು ಸಲ್ಲಿಸಬೇಕು ಮತ್ತು ಅದು ಅಧಿಸೂಚನೆಯ ಕೊನೆಯ ದಿನಾಂಕದಂದು ಮಾನ್ಯವಾಗಿರತಕ್ಕದ್ದು. ಯಾವುದೇ ಅಭ್ಯರ್ಥಿಯು ಅದನ್ನು ಸಲ್ಲಿಸಲು |

| | | |
|---|---|---|
| | | ವಿಫಲವಾದರೆ, ಅಂತಹ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿಯನ್ನು ಪಡೆಯಲು ಅನರ್ಹರಾಗುತ್ತಾರೆ. |
| ಸೇವಾನಿರತ ಅಭ್ಯರ್ಥಿಗಳು | ಆಯ್ಕೆ ಪಟ್ಟಿ ಬಿಡುಗಡೆಯಾದ ತಕ್ಷಣ ನೇಮಕಾತಿ ಆದೇಶವನ್ನು ನೀಡುವ ಮೊದಲು ಸೇವಾನಿರತ ಅಭ್ಯರ್ಥಿಗಳು ನಿರಕ್ಷೇಪಣಾ ಪ್ರಮಾಣಪತ್ರವನ್ನು (NOC) ಈ ಕಚೇರಿಗೆ ಸಲ್ಲಿಸಬೇಕು. | |
| **ಸೂಚನೆ** : ಆನ್‌ಲೈನ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದ ನಂತರ ಪಡೆದ ಜಾತಿ ಪ್ರಮಾಣಪತ್ರ ಮತ್ತು ಇತರೆ ಮೀಸಲಾತಿಯ ಪ್ರಮಾಣಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. | | |

(i) ಅಭ್ಯರ್ಥಿಗಳು ಕೋರಿದ ಶೈಕ್ಷಣಿಕ ಅರ್ಹತೆ, ಜಾತಿ ಮತ್ತು ಇತರೆ ಮೀಸಲಾತಿಗಳಿಗೆ ಸಂಬಂಧಿಸಿದ ಅಪ್ ಲೋಡ್ ಮಾಡಲಾದ ಮೂಲದಾಖಲಾತಿಗಳನ್ನು ಬೆರಳಚ್ಚು ಪರೀಕ್ಷೆ / ಸಂದರ್ಶನ / ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸಬೇಕು. ಯಾವುದೇ ಅಭ್ಯರ್ಥಿ, ಬೆರಳಚ್ಚು ಪರೀಕ್ಷೆ / ಸಂದರ್ಶನ / ಪರಿಶೀಲನೆಯ ಸಮಯದಲ್ಲಿ ಅಪ್ ಲೋಡ್ ಮಾಡಲಾದ ಮೂಲದಾಖಲಾತಿಗಳನ್ನು ಸಲ್ಲಿಸಲು ವಿಫಲರಾದರೆ, ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಗೊಳಿಸಿ ಸಾಮಾನ್ಯ ವರ್ಗದ ಅಡಿಯಲ್ಲಿ (ಅರ್ಹ ಅರ್ಜಿಗಳನ್ನು) ಮಾತ್ರ ಪರಿಗಣಿಸಲಾಗುತ್ತದೆ.

(ii) ಅಭ್ಯರ್ಥಿಗಳು ನಿಗದಿತವಲ್ಲದ ನಮೂನೆಯಲ್ಲಿ ಮೀಸಲಾತಿ ಪ್ರಮಾಣಪತ್ರವನ್ನು ಸಲ್ಲಿಸಿದರೆ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**V.** ಬೆರಳಚ್ಚು ಪರೀಕ್ಷೆ /ಸಂದರ್ಶನಕ್ಕೆ ಕರೆಯಲಾದ ಅಭ್ಯರ್ಥಿಗಳು ಸಂದರ್ಶನಕ್ಕೆ ಬರುವಾಗ ತಮ್ಮ ಸಂದರ್ಶನದ ಸೂಚನಾ ಪತ್ರದೊಂದಿಗೆ, ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್ ಅಥವಾ ಪ್ಯಾನ್ ಕಾರ್ಡ್ ಅಥವಾ ಪಡಿತರ ಚೀಟಿ ಅಥವಾ ಪಾಸ್‌ಪೋರ್ಟ್ ಅಥವಾ ಚಾಲನಾ ಪರವಾನಗಿಯನ್ನು ಭಾಗ ಬಿ –II (e) ನಲ್ಲಿ ಉಲ್ಲೇಖಿಸಿರುವ ಮೀಸಲಾತಿ ದಾಖಲೆಗಳೊಂದಿಗೆ ಹಾಜರುಪಡಿಸಬೇಕು.

**VI.** ಮೂರು ನಡತೆ ಪ್ರಮಾಣಪತ್ರಗಳು ಅಂದರೆ,

c) ಅಭ್ಯರ್ಥಿಯು ಪದವಿ ಪೂರ್ಣಗೊಳಿಸಿದ ಸಂಸ್ಥೆಯ ಮುಖ್ಯಸ್ಥರಿಂದ ವಿದ್ಯಾಭ್ಯಾಸದ ವಿವರಗಳೊಂದಿಗೆ ಪಡೆದ ಒಂದು ಪ್ರಮಾಣಪತ್ರ.

ಮತ್ತು

d) ಸಂಬಂಧಿಕರಲ್ಲದ ಆದರೆ ಅಭ್ಯರ್ಥಿಯೊಂದಿಗೆ ಚೆನ್ನಾಗಿ ಪರಿಚಿತರಾಗಿರುವ ಇಬ್ಬರು ಗೌರವಾನ್ವಿತ ವ್ಯಕ್ತಿಗಳಿಂದ ಪಡೆದ ಎರಡು ಪ್ರಮಾಣಪತ್ರಗಳು.

**VII.** ಆನ್‌ಲೈನ್ ಅರ್ಜಿಯಲ್ಲಿ ಮತ್ತು ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಸಲ್ಲಿಸಿದ ಮೂಲ ದಾಖಲೆಗಳಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದರೆ, ಅಭ್ಯರ್ಥಿಯು ತನ್ನ ಉಮೇದುವಾರಿಕೆಯನ್ನು ರದ್ದುಗೊಳಿಸಲು ಹೊಣೆಗಾರನಾಗಿರುತ್ತಾನೆ/ಳೆ.

**VIII.** ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಲಾದ ವರ್ಗ / ಮೀಸಲಾತಿಗಳು ಅಂತಿಮವಾಗಿರುತ್ತದೆ. ನಂತರ ಬದಲಾವಣೆ ಕೋರಿದ್ದಲ್ಲಿ ಅಂತಹ ಕೋರಿಕೆಗಳನ್ನು ಯಾವುದೇ ಸಂದರ್ಭದಲ್ಲಿಯೂ ಪರಿಗಣಿಸಲಾಗುವುದಿಲ್ಲ.

**IX.** ಬೆರಳಚ್ಚು ಪರೀಕ್ಷೆ / ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ನೇಮಕಾತಿಗೆ ಯಾವುದೇ ಹಕ್ಕನ್ನು ನೀಡಿದಂತಾಗುವುದಿಲ್ಲ ಮತ್ತು ಅಭ್ಯರ್ಥಿಯು ನೇಮಕಕ್ಕೆ ಎಲ್ಲಾ ರೀತಿಯಲ್ಲಿ ಸೂಕ್ತ ಎಂದು, ಅಗತ್ಯವೆಂದು ಪರಿಗಣಿಸಬಹುದಾದ ವಿಚಾರಣೆಗಳ ನಂತರ ಕರ್ನಾಟಕ ಉಚ್ಚ ನ್ಯಾಯಾಲಯವು ತೃಪ್ತಿ ಹೊಂದದ ಹೊರತು ಯಾವುದೇ ಅಭ್ಯರ್ಥಿಯನ್ನು ಹುದ್ದೆಗೆ ನೇಮಿಸಲಾಗುವುದಿಲ್ಲ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



**X.** ದತ್ತಾಂಶ ನಮೂದು ಸಹಾಯಕರ ಹುದ್ದೆಗೆ ನೇಮಕಗೊಂಡ ಅಭ್ಯರ್ಥಿಗಳನ್ನು ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರಿನಲ್ಲಿನ ಪ್ರಧಾನ ಪೀಠದಲ್ಲಾಗಲೀ ಅಥವಾ ಧಾರವಾಡ ಅಥವಾ ಕಲಬುರಗಿಗಳಲ್ಲಿನ ಪೀಠಗಳಲ್ಲಾಗಲೀ ನಿಯೋಜಿಸಲಾಗುವುದು.

**XI.** ಅಭ್ಯರ್ಥಿಯು ಯಾವುದೇ ಸಿಬ್ಬಂದಿ ಅಥವಾ ಸಿಬ್ಬಂದಿಯೇತರರ ಮೂಲಕ ಉಮೇದುವಾರಿಕೆಗಾಗಿ ಯಾವುದೇ ವಿಧಾನದಿಂದ ಬಾಹ್ಯ ಬೆಂಬಲವನ್ನು ಪಡೆಯಲು ಪ್ರಯತ್ನಿಸಿದರೆ, ಅವರು ನೇಮಕಾತಿಗೆ ಅರ್ಹರಾಗಿರುವುದಿಲ್ಲ.

**XII.** ಈ ಅಧಿಸೂಚನೆಯು ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ನಡುವೆ ಯಾವುದೇ ಅಸಂಗತತೆ ಉಂಟಾದರೆ, ಇಂಗ್ಲೀಷ್ ಆವೃತ್ತಿಯು ಮಾನ್ಯವಾಗಿರುತ್ತದೆ.

**XIII.** ಪರಿಶೀಲನೆಯ ಯಾವುದೇ ಸಮಯದಲ್ಲಿ ಅಥವಾ ನೇಮಕಾತಿಯ ಯಾವುದೇ ಹಂತದಲ್ಲಿ, ಅಭ್ಯರ್ಥಿಯು ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ಸುಳ್ಳು ಎಂದು ಕಂಡುಬಂದಲ್ಲಿ ಅಥವಾ ಅಭ್ಯರ್ಥಿಯು ಯಾವುದೇ ಅರ್ಹತಾ ಮಾನದಂಡಗಳನ್ನು ಪೂರೈಸದಿದ್ದಲ್ಲಿ ಅಥವಾ ಅಭ್ಯರ್ಥಿಯು ಯಾವುದೇ ವಸ್ತುನಿಷ್ಠ ಸತ್ಯಗಳನ್ನು ತಿರುಚಿದರೆ ಅಥವಾ ಮೊಟಕುಗೊಳಿಸಿದರೆ, ಅಭ್ಯರ್ಥಿಯ ಉಮೇದುವಾರಿಕೆಯನ್ನು ರದ್ದುಗೊಳಿಸಲಾಗುತ್ತದೆ. ನೇಮಕಾತಿಯ ನಂತರವೂ ಅಂತಹ ಯಾವುದೇ ನ್ಯೂನತೆಗಳು ಕಂಡುಬಂದರೆ, ಅಭ್ಯರ್ಥಿಯ ನೇಮಕಾತಿಯನ್ನು ಕೊನೆಗೊಳಿಸಲಾಗುವುದು. ತಪ್ಪು, ಅಪೂರ್ಣ ಅಥವಾ ತಪ್ಪಾದ ಮಾಹಿತಿಯನ್ನು ಒದಗಿಸುವುದು ಅಭ್ಯರ್ಥಿಯ ಅನರ್ಹತೆಗೆ ಕಾರಣವಾಗುವುದಲ್ಲದೆ ಅಂತಹ ಮಾಹಿತಿಯನ್ನು ಒದಗಿಸಿದ್ದಕ್ಕಾಗಿ ಕ್ರಿಮಿನಲ್ ಮೊಕದ್ದಮೆಗೆ ಹೊಣೆಗಾರರಾಗುತ್ತಾರೆ.

**ಗೌರವಾನ್ವಿತ ಮುಖ್ಯ ನ್ಯಾಯಮೂರ್ತಿಗಳ ಆದೇಶಾನುಸಾರ,**

ಸಹಿ/-
**(ಎಂ. ಚಂದ್ರಶೇಖರ್ ರೆಡ್ಡಿ)**
**ಮಹಾವಿಲೇಖನಾಧಿಕಾರಿ**

**PR-496**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-೫೯.

THAMMAIAH